ಅಪರಂಜಿ

ಸೆಪ್ಟೆಂಬರ್ 96

ತಿಳಿನಗೆಯ ಕಾರಂಜಿ



* ಪ್ರಕಾಶ್
* ಟೀ ಎಸ್ಸಾರ್ ರಾವ್
* ಕಮಲಾ ರಾಮಸ್ವಾಮಿ
* ನಾಗೂಶ್ರೀ ಸೂರಿ
* ಚಂಚಲಾ ಶ್ರೀಕಂಠಯ್ಯ
* ಕಂಭಂ ಕೃಷ್ಣಮೂರ್ತಿ
* ಯು. ಎಸ್. ರಾವ್
* ನಾಟಿ
* ಎಚ್. ಡಿ. ಚಂದ್ರಪ್ಪಗೌಡ
* ಎಂ. ಎಸ್. ಕೆ.
* ಸಾ. ಕೃ. ಪ್ರಕಾಶ್

ಬಿಡಿ ಪ್ರತಿ : 3 ರೂ. 50 ಪೈ



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 13 | ಸೆಪ್ಟಂಬರ್ 96 | ಸಂಚಿಕೆ- 12

ಶ್ರೀ ಎಸ್. ವಿ. ರಂಗಸ್ವಾಮಿ

ಅಪರಂಜಿಯ ಪ್ರಾರಂಭದ ದಿನಗಳು. ಒಮ್ಮೆ ನಾನು ತಾತಾ ಇನಿಸ್ಟಿಟ್ಯೂಟ್‌ನಲ್ಲಿ ಬೆಳಗಿನ ವಾಕಿಂಗ್ ನಡೆಸಿದ್ದಾಗ, ರಂಗಸ್ವಾಮಿಯವರು ಸಿಕ್ಕಿದ್ದರು. ಕೊರವಂಜಿಯ ಪುನರವತಾರದ ಬಗ್ಗೆ ಅವರಿಗೆ ಬಹಳ ಖುಷಿ ಆದಂತಿತ್ತು. 'ನಿನ್ನ ನಷ್ಟದಲ್ಲಿ ನಮ್ಮದೂ ಪಾಲು ಇರಲಿ, ಜಾಹಿರಾತು ದರದ ಪಟ್ಟಿ ಕಳಿಸಪ್ಪ' ಎಂದು ಹೇಳಿ ನನ್ನನ್ನು ಹುರಿದುಂಬಿಸಿದ್ದರು. ಅಂದಿನಿಂದ ಪ್ರತಿವರ್ಷ ತಪ್ಪದೇ ಹಾಸ್ಯ ಸಾಹಿತ್ಯದ ಬೆಳವಣಿಗೆಗೆ ತಮ್ಮ ಸಹಾಯಮಾಡುತ್ತಲೇ ಬಂದ ಮಹನೀಯರು ಶ್ರೀ ಎಸ್. ವಿ. ರಂಗಸ್ವಾಮಿಯವರು. ಅಂತಹ ಹಾಸ್ಯ ರಸಿಕರನ್ನು ಹಿತೈಷಿಗಳನ್ನು ಇಂದು ಅಪರಂಜಿ ಕಳೆದುಕೊಂಡಿದ್ದಾಳೆ. ಹುಟ್ಟು ಸಾವು ಎಂಬ ನಿತ್ಯಸತ್ಯವನ್ನು ತಿಳಿದೂ ಅಪರಂಜಿಯ ಮನದಲ್ಲಿ ಈ ಸಜ್ಜನರ ಬಗ್ಗೆ ಇರುವ uppermost thought ಅಂದರೆ "we miss you!"

ಅವರೀಗ ಎಲ್ಲಿದ್ದರೂ, ಅದೇ ನಗುಮನೋಭಾವದಿಂದ ನಗೆಮೊಗದಿಂದ ಇರುತ್ತಾರೆಂಬುದು ಅಪರಂಜಿಯ ಧೃಡ ನಂಬಿಕೆ.

ಗೌರವ ಸಲಹೆಗಾರರು:	ಚಂದಾ ವಿವರ:	
ಶ್ರೀ ಅ. ರಾ. ಸೇ.	ಬಿಡಿ ಪ್ರತಿ:	ರೂ. 3.50
ಶ್ರೀ ಶೇಷಗಿರಿ	ವಾರ್ಷಿಕ ಚಂದಾ:	ರೂ. 35
ಸಂಪಾದಕ:	ಆಜೀವ ಚಂದಾ :	ರೂ. 350
ಎಂ. ಶಿವಕುಮಾರ್		

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)
ದೂರವಾಣಿ: 3345259

ಈ ಸಂಚಿಕೆಯಲ್ಲಿ

ಸಂಪುಟ 13   ಸೆಪ್ಟೆಂಬರ್ 96   ಸಂಚಿಕೆ- 12

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3   ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಪ್ರಕಾಶ್

ದೂರವಾಣಿ ಕದ್ದಾಲಿಕೆ; ಪ್ರಧಾನಿ ನಿರಾಕರಣೆ

- ಸುದ್ದಿ

ನಂ ಟೆಲಿಫೋನ್‌ನಲ್ಲಿ 'ಆಲಿಕೆ'ಯೇ ಅಸಾಧ್ಯ ಕದ್ದಾಲಿಕೆ ಎಲ್ಲಿ ಬಂತು??

★ ★ ★

ಮುಂಬೈ ಷೇರುಪೇಟೆ ಕುಸಿತದಿಂದ ಆತಂಕವಿಲ್ಲ

- ಶೀರ್ಷಿಕೆ

"ಯಾರಿಗೆ??"

★ ★ ★

ವಿದ್ಯಾರ್ಥಿಗಳ ನೈತಿಕ ಮಟ್ಟದ ವೃದ್ಧಿಗೆ ಸಚಿವರ ಕರೆ

- ಪತ್ರಿಕೆ

ವೈಸೇ ವರ್ಸ!!

★★★

ನ್ಯಾಯಾಲಯಗಳಲ್ಲಿ ಕಂಪ್ಯೂಟರ್ ಬಳಕೆಗೆ ಕ್ರಮ

- ಸುದ್ದಿ

"ರಿಟರ್ನ್" ಬಟನ್ ಇಲ್ಲದ್ದಿರೆ ಕ್ಷೇಮ!!

★ ★ ★

ಕುವೆಂಪುಗೆ ಭಾರತರತ್ನ ಪ್ರಶಸ್ತಿಗೆ ಆಗ್ರಹ

- ಸುದ್ದಿ

ವಿಶ್ವ ಮಾನವನಿಗೆ ಇದು ಚಿಕ್ಕ ಪ್ರಶಸ್ತಿ??

★ ★ ★

ಕಾವೇರಿ; ಮಾತುಕತೆಗೆ ತಮಿಳುನಾಡು ಒಪ್ಪಿಗೆ

- ಪತ್ರಿಕೆ

'ಕತೆ' ಗಿಂತ ಮಾತು ಜಾಸ್ತಿ ಇದ್ದರೆ ವಾಸಿ!!

★ ★ ★

ಹಸಿರಾದ ಪೈರಿಗಾಗಿ ಮೇಲು ಗೊಬ್ಬರ - ಯೂರಿಯಾ

- ಜಾಹೀರಾತು

ಯಾಕೋ ಭಯವಾಗುತ್ತೆ!!

★ ★ ★

ಸೆಪ್ಟೆಂಬರ್‌ಗೆ ಪಾನ ನಿಷೇಧ ವರದಿ ಸಿದ್ಧ

- ಸುದ್ದಿ

ಸದ್ಯ, ಬರೀ ವರದಿ ತಾನೇ?!

★ ★ ★



ಪ್ರಧಾನಿ ಭಾಷಣಕ್ಕೆ ಮಾತ್ರ ಪವರ್ ಕಟ್ ಇರಲ್ಲ ಅಂತ ಯಾರೂ
ಗೋಡೆ ಮೇಲೆ ಬರೆದದ್ದು?

ಫಣಿಯಪ್ಪನ ಹುಲಿಗಳು

-ಟೀಎಸ್ಸಾರ್ ರಾವ್

ನಮ್ಮೂರಿನ ಸುಪ್ರಸಿದ್ಧ ಷಿಕಾರಿ Fearless ಫಣಿಯಪ್ಪನನ್ನು ಆ ದಿನ ಏನು ಮಾಡಿದರೂ · ತಪ್ಪಿಸಿಕೊಳ್ಳಲಾಗಲಿಲ್ಲ ರೈಲಿನಲ್ಲಿ. ಏಕೆಂದರೆ ಬೇರೆ ಡಬ್ಬಿಗಳಲ್ಲಿ 'ಬಾಗಿಲು ಯಾವುದು' ಅಂತ ಪತ್ತೆಯಾಗದಂತೆ ಜನ ಮುತ್ತಿಕೊಂಡಿದ್ದರು. ಈತ ನಮ್ಮ ಕಡೆ ಕಾಡಿನ ಖಗಮೃಗಗಳನ್ನು ಹೊಡೆದಿರುವುದಕ್ಕಿಂತ 'ಹೊಡೆದಿರುವೆ'ನೆಂದು ಹೇಳಿಕೊಳ್ಳುವ ಕತೆಗಳೇ ಹೆಚ್ಚು, ಹಾಗು ಸ್ವಾರಸ್ಯ ಎನ್ನುವುದನ್ನು ಎಲ್ಲರೂ ಬಲ್ಲರು.

'ಈಗಲೋ, ಆಗಲೋ ಈತನ ಸಂಭಾಷಣೆಗೆ ತುತ್ತಾಗಬೇಕಲ್ಲಾ' ಎಂದು ನಾಲ್ಕು ಜನ ಮೊಸರಿನವರ ಮಧ್ಯೆ ಸಿಕ್ಕಿಕೊಂಡು, ದೋಸೆ ಮಧ್ಯದ ಚಟ್ನಿಯಾಗಿ, ಮುದುರಿಕೊಂಡು ಮುಂದಿನವನ ಹಳ್ಳಿ ತಲೆಯ ವಾಸನೆಯನ್ನು ಉಚ್ಛ್ವಾಸಿಸುತ್ತಾ ನಿಂತಿದ್ದ ನನ್ನ ವಾಸನೆ ಫಣಿಯಪ್ಪನಿಗೆ ತಗುಲಿದೊಡನೆಯೇ, ಆತ ನನ್ನ ಕೈಹಿಡಿದು ಸೆಳೆದುಕೊಂಡ ತನ್ನ ಕಡೆಗೆ. ನಾನು ಮೊಸರಿನವರ ಗೊಂಚಲಿನಿಂದ ಕಿತ್ತು ಬಂದೆ. ನನ್ನ ಚಪ್ಲಿಗಳು ಕಳಚಿ ಸಂದಿನಲ್ಲಿ ಮಾಯವಾದುವು. ಫಣಿಯಪ್ಪ ಮೈಯನ್ನು ಅಕ್ಕಪಕ್ಕಕ್ಕೆ ಎರಡು ಸಾರಿ ಹೊರಳಿಸಿ, ಒಂದು ತೊಡೆ ಎತ್ತಿ ಇನ್ನೊಂದರ ಮೇಲಿಟ್ಟುಕೊಂಡ. ನಾನು ಮಲಗಿಕೊಳ್ಳುವಷ್ಟು ಸ್ಥಳವಾಯಿತು ಕೂತುಕೊಂಡೆ.

''ನಾನು ಡಬ್ಬಲ್-ಹುಲಿ ಮಾರ್ಕಿನ ಬೀಡಿ ಉಪಯೋಗಿಸುವುದು-ಹಚ್ಚಿ ಒಂದು'' ಅಂತ ಕಟ್ಟು ತೆಗೆದ, ''ಕ್ಷಮಿಸಿ, ಅಭ್ಯಾಸವಿಲ್ಲ'' ಅಂತ ಪಾರಾದೆ.

''ನನ್ನ ಹತ್ತಿರ ಗನ್‌ಲೈಸೆನ್ಸ್ ಇರುವುದಕ್ಕೂ, ನಾನು ಹುಲಿಮಾರ್ಕು ಬೀಡಿಯನ್ನೇ ಉಪಯೋಗಿಸುವುದಕ್ಕೂ, ನನ್ನ ಮೀಸೆಗೂ ಅನೇಕರು ಸಂಬಂಧ ಹುಡುಕುವುದಕ್ಕೆ ಬುಡವಿಲ್ಲವಾದರೂ, ಇದರ ರುಚಿ ಬಲ್ಲವನೇ ಬಲ್ಲ'' ಅಂತ ಕಟ್ಟು ಒಳಗಿಟ್ಟು ಕಡ್ಡಿ ಹಚ್ಚಿದ. ''ಚಿಂತೆಯಿಲ್ಲ. ಗಾಳಿ ಜೋರಾಗಿದೆ-ನನಗೆ ಈಚೆಗೆ, ರೈಲಿನಲ್ಲಿ ವಾಂತಿಯಾಗುವುದು ನಿಂತಿದೆ'' ಅಂತ ಸ್ವಲ್ಪ ಸರಿದು ಮೂಲೆ ಹಿಡಿದೆ. ಆತ ಬೀಡಿ ಕೊಡವಿಕೊಂಡು ಮುಂದರಿದ.

'ನಾನೇನು ಇವತ್ತು ನಿನ್ನೆಯಿಂದ ಅಲ್ಲಾಸ್ವಾಮೀ ಇದನ್ನ ಸೇದೋದು. ನನ್ನನ್ನ ನಮ್ಮಪ್ಪ ಕನ್ನಡ ಲೋಯರ್ ಸೆಕೆಂಡ್ರಿಯಿಂದ ಹಿಂದಕ್ಕೆ ಕರೆಸ್ಕೋಳ್ಳೋದಕ್ಕೆ ಒಂದು ವರ್ಷ ಮುಂಚಿನಿಂದಲೇ ಶುರುಮಾಡಿದ್ದೆ'. ಹೇಗಿದ್ದರೂ ಬೇಜಾರು. ''ನಿದ್ದೆ''! ಅದೂ ಈ ಮನುಷ್ಯನ ಪಕ್ಕದಲ್ಲಿ! ಸುತರಾಂ ಸಾಧ್ಯವಿಲ್ಲದ ಮಾತು. ಮಾತಾದರೂ ಆಡೋಣ ಅಂತ ನಾನೇ ಬಾಯಿಟ್ಟೆ.

''ನೋಡಿದಿರಾ! 'ಡಬ್ಬಲ್ ಹುಲಿ' ಅಂದ ತಕ್ಷಣ ಜ್ಞಾಪಕವಾಯಿತು, ಮೊನ್ನೆ ಯಾರೋ

ಎರಡು ಹುಲಿ ಹೊಡೆದವರಂತೆ ನಿಜವೇ''? ಎಂದೆ.

''ಉಂಟೇ ಸ್ವಾಮಿ ಎಲ್ಲಾದರೂ? ನಾನು ಹೇಳಿರಲಿಲ್ಲವೆ- ಒಂದು ಸಾರಿ ನಾನು ಬಂದೂಕ ಬಾರ್ ಮಾಡಿದಮೇಲೆ ಗೊತ್ತಾಯ್ತು 'ಹೆಣ್ಣು' ಅಂತ. ಅದಕ್ಕೇ ಸುಮ್ನೆ ಒಂದು ಕಾಲು ಮುರಿದು ಬಿಟ್ಟದ್ದೆ ಅಂತ? ಆ 'ಮರೀ'ನ ಹೊಡಿಯೋದಕ್ಕೇಂತ ಡಬ್ಬಲ್ ಶಿಕಾರಿಗಳು ಹೋಗಿ ಸಿಂಗಲ್ ಆಗಿ ಬಂದ ಮಾತಲ್ಲವೇ ನೀವು ಹೇಳ್ತಾ ಇರೋದು?''

''ಓ....ಹಾಗೇನು?''

''ಸರಿ. ಮತ್ತಷ್ಟಲ್ದೆ'....ನಮ್ಮ ಕಾಡಿನ ಹುಲಿಗಳ ಕಿಲಾಡಿತನ ನನಗೆ ಗೊತ್ತಿಲ್ಲವೆ? ಯಾವ ಗಂಡಸಿಗೆ ಚರ್ಬಿ ಇದ್ರೀ? ಬಂದೂಕ್ ಬಾರು ಮಾಡಿ ಬದುಕಿ ಬರೋ ಅಷ್ಟು?''

''ತ್ಚು...ತ್ಚು...ತ್ಚು''

''ಮೈಸೂರು ಹುಲಿಗಳು ಕಿಲಾಡಿ ಕೋಮಿನವು ಅನ್ನೋದಕ್ಕೆ ಹೇಳ್ತೇನ್ಕೇಳೀ-ಮೊನ್ನೆ ದಸರಾದಲ್ಲಿ ವಿಜಯದಶ್ಮೀಕ್ಕೂಡ ಚಕ್ಕರ್ ಹೊಡೆದು ಹುಲಿಕಲ್ ಕಾಡಿಗೆ ಹೋದೆ. ಯಾವಾಗ ಶಿಕಾರಿಗೆ ಹೋದರೂ, ನಾನಾಯ್ತು ನನ್ನ ಬಂದೂಕವಾಯ್ತು. ಬೇರೆ ಒಂದು ನರಪ್ರಾಣಿ ಕಟ್ಟಿಕೊಂಡು ಹೋಗುಲ್ಲ ನಾನು, ಹೋದೆ. ಇನ್ನೂ ಮಠಮಠ ಮಧ್ಯಾನ್ಹ. ಒಂದು ಬೀಡಿ ಹಚ್ಚಿ, ದಂ-ತಗೊಳ್ಳೋಣಾಂತ ಕೂತೆ ಸ್ವಾಮಿ ಒಂದು ಮರದ ಪಕ್ಕದಲ್ಲಿ. ಅದು ಬಿದ್ದಮರವಲ್ಲ, 'ಹುಲಿ' ಅಂತ ಪತ್ತೆಯಾದದ್ದು ಅದರ ಮುದುರಿದ ಬಾಲ ನೆಲಕ್ಕೆ ಬಡಿದಾಗಲೇ ನನ್ನ ಬಾಯಿಂದ ಬೀಡಿ ಕೆಳಗೆ ಬಿತ್ತು. ನನ್ನ ಕೈಕಾಲಿನ ತಾಖತ್ತೆಲ್ಲಾ ಹಾಗೇ ನೆಲಸಮವಾಯ್ತೂಂತನ್ನಿ. ಎಂಥಾ ಹುಲೀಂತೀರಿ! ಭಾರೀ..... ಬಹು ಭಾರೀ ಮೈಸೂರು ಗಂಡು..... ಇನ್ನೇನು ಸಿದ್ಧವಾಗಿದೆ....

ಎದ್ದೆ.... ಹೇಗೆ ಎದ್ದೆನೋ ಆ ಪರಶಿವ ಬಲ್ಲ. ಹತ್ತುವುದಕ್ಕೆ ಮರವಿಲ್ಲ- ಮರವಿಲ್ಲವೇನು, ಅಂಥಾ ಸಮಯದಲ್ಲಿ ಕಾಲೇ ಇಲ್ಲ ಅನ್ನಿ. ಓಡಲು ಪ್ರಯತ್ನಪಟ್ಟೆನೋ- ಒಂದೇ ನೆಗೆತಕ್ಕೆ ನನ್ನನ್ನ ಒಂದು ಯಃಕಚಿತ್ ಮೊಲದಂತೆ ಅಗಿದು ಬಿಡುತ್ತೆ..... ಏನುಮಾಡೋದು? ಅದೆಲ್ಲಿತ್ತೋ ಧೈರ್ಯ ?..... ಅಂಥಾ ಸಮಯದಲ್ಲಿ ಭಗವಂತನೇ ಬಚಾಯಿಸ್ಬೇಕೂ ಅನ್ನೋದು ಸುಳ್ಳುಸ್ವಾಮಿ. ನಿಮ್ಮ ಬುದ್ಧಿ ನಿಮ್ಗಾನ್ಕಾಪಾಡಿದ್ರೇ ಉಂಟು. ಕಾಲು ನಿಗರಿಸಿ ಎದ್ದು ಒಂದು ಹೆಜ್ಜೆಯಿಟ್ಟಿತು ಬಾಯಿ ಕಳೆದುಕೊಂಡೇ. ಒಂದು ಭಾರಿ ಗುಹೆ ಅರದ ಬಾಯಿ. ಒಂದು ಸಾರಿ ನಮ್ಮನೆಯಲ್ಲಿ ನಮ್ಮಾಕೆಯ ಹಲ್ಲು ಕೀಳೋವಾಗ ಡಾಕ್ಟ್ರು ಅಷ್ಟು ಗಾಬ್ರಿ ಬಿದ್ದದ್ದು ಯಾಕೇಂತ ಆಗ ತಿಳೀತು ನನಗೆ. ಧೈರ್ಯಮಾಡಿದೆ. 'ತಿರುಪತಿ ತಿಮ್ಮಪ್ಪಾ' ಅಂದೆ ನುಗ್ಗಿದೆ 'ಗಪ್' ಅಂತ. ಕಳೆದ ಬಾಯಿಗೆ ಕೈ ಇಟ್ಟು ಬಾಯಿನ ಕೆಳಭಾಗಕ್ಕೂ ಮೇಲ್ಬಾಗಕ್ಕೂ ಗೂಟ ಹೊಡೆದಂತೆ ಟೇಕಾ ಕೊಟ್ಟು ಭದ್ರಪಡಿಸಿಕೊಂಡೆ. ಗುಡುಗಿನಂತೆ ಕುಣಿಯಲಾರಂಭಿಸಿತು. ಹೀಗೇ ಇದ್ದರೆ ಕೆಲಸ ಕೆಟ್ಟಿತು. ಅಂದಿದ್ದೇ...... ಏನುಮಾಡಿದೆ ಗೊತ್ತೆ? ಅದರ ಹಂಡೆ ಬಾಯಿನಲ್ಲಿ ಮೆಲ್ಲಗೆ ಒಂದೊಂದಾಗಿ ನನ್ನ ಎರಡು ಕಾಲುಗಳನ್ನೂ ತೂರಿಸಿ,-ಏನಾಶ್ಚರ್ಯವಿಲ್ಲ!.... ಇಪ್ಪತ್ತಡಿ ಹುಲಿ ಸ್ವಾಮೀ ಅದು-ಹುಷಾರಾಗಿ ಮೈಯೆಲ್ಲಾ ಒಳಕ್ಕೆಳೆದುಕೊಂಡು ಕೈಬಿಟ್ಟೆ. ವಿಶಾಲವಾಗಿದೆ

ಒಳಭಾಗ. ಉಸಿರಾಡೋದಕ್ಕೇಂತೀರಾ? ಅದರ ಎರಡು ಕಿವಿಗಳಿಂದಲೂ ಬರ್‍ತಾ ಇದ್ದಷ್ಟು ಬೆಳಕೂ ಗಾಳೀ ನಮ್ಮನೆ ನಾಲ್ಕು ಕಿಟಕೀಲಿ ಬರುಲ್ಲಾ ಸ್ವಾಮಿ.

ಹಾಗೇ ಮುಂದೆ ಹೋದೆ. ಅದರ ಹೃದಯ-ಗೇರುಸೊಪ್ಪೆಯಂತೆ ರಕ್ತ ಧುಮುಕುತ್ತಿದೆ ಶ್ವಾಸಕೋಶಗಳು-ಅದು ಉಸಿರೆಳೆದಾಗಲೆಲ್ಲಾ ಒಳಗೆ ಗಾಡಾಂಧಕಾರ ಕವಿಯುತ್ತೆ. ಕರೀ ಪಿತ್ತಕೋಶಗಳು-ನಮ್ಮೂರಿಗೆ ಬಂದಿರುವ ಅಮೀಲ್ದಾರ್‍ರ ಪಿತ್ತಕೋಶ ಇನ್ನೂ ಕಪ್ಪಗಿರಬಹುದು. ಹೊಟ್ಟೆ ಸಿಕ್ಕಿತು ಆಮೇಲೆ, ಸುಳ್ಳ್ಯಾಕೆ ಹೇಳಲಿ. ಒಂದೆರಡು ಕಾಡು ದ್ರಾಕ್ಷಿ ಹಣ್ಣುಗಳನ್ನು ಮಾತ್ರ ಆರಿಸಿಕೊಂಡು ತಿಂದೆ ಅಲ್ಲಿ. ಹಾಗೆ ಆರಿಸುವಾಗ ಕೇವಲ ಕೆಲವು ದಿವಸದ ಹಿಂದೆ ಆ ಕಾಡಿಗೆ ಷಿಕಾರಿ ಹೋಗಿ ಪತ್ತೆ ಇಲ್ಲವಾಗಿದ್ದ ಶಂಭುವಿನ ತಲೆ ಕೂಡ ಇತ್ತು. ಅಯ್ಯೋ ಎಂದೆ. ಇದೇ ಹುಲಿ ಬಾಯಿಗೆ ಕೈಕೊಟ್ಟು ಕತ್ತರಿಸಿಕೊಂಡು ಬಂದ ಕಾಡಯ್ಯನ ವಾಚೂ ಚೈನೂ ಸಮೇತ ಜಠರದಲ್ಲೇ ಇತ್ತು. ಆರು ಗಂಟೆ ಏಳು ನಿಮಿಷವಾಗಿತ್ತು ಅದರಲ್ಲಿ. ಇದಲ್ಲದೆ ನಾಲ್ಕಾರು ನಾಯಿಗಳು, ಮೂರು ಮೊಲಗಳು, ಎರಡು ಇಲಿಗಳು ಆಟವಾಡುತ್ತಿದ್ದುವು. ಮುಂದೆ ಹೋದೆ ಹಾಗೇ ತೆವಳಿಕೊಂಡು. ರಸ್ತೆ ಇಕ್ಕಟ್ಟಾಯಿತು- ಕರುಳುಗಳು ಇನ್ನೂ ಇಕ್ಕಟ್ಟಾಯಿತು. ಒಳಗಿನಿಂದಲೇ ಬೆರಳುಗಳನ್ನು ಕೊಂಡಿ ಮಾಡಿ ಬಾಲದ ತುದಿಯನ್ನು ಬಿಗಿಯಾಗಿ ಹಿಡಿದೆ. ಹಿಂದಕ್ಕೆ ಎಳೆಯಲಾರಂಭಿಸಿದೆ.('ಹೇಗೆ ಗೊತ್ತೆ' ಅಂತ ತನ್ನ ಕೋಟು ಬಿಚ್ಚಿ ತೋಳಿಗೆ ಕೈಹಾಕಿ ತುದಿ ಹಿಡಿದು ತೋಳನ್ನು ಹಿಂದಕ್ಕೆ ಎಳೆದು ಒಳಮೈ ಹೊರಮಾಡಿ ತೋರಿಸಿದ.)

ಹುಷಾರಾಗಿ ಹಿಂದಕ್ಕೆ ಸರಿಯುತ್ತಾ ಬಂದೆ. ಕರುಳು, ಜಠರ, ಹೃದಯ ಹೀಗೇ ಗಂಟಲುತನಕ. ನಂಬಿದರೆ ನಂಬಿ ಬಿಟ್ಟರೆ ಬಿಡಿ- ಬಾಲದ ಮುಷ್ಟಿಮಾತ್ರ ಬಿಡಲಿಲ್ಲ ಪುನಃ ಬಾಯಿಗೆ ಬಂದು ನಾಲಗೆಗೆ ಬಲವಾಗಿ ಒದ್ದೆ ಬಾಯಿಬಿಟ್ಟಿತು. ಕೈಕೊಟ್ಟುಕೊಂಡು ಅಡ್ಡಲಾಗಿ-ಹುಷಾರಾಗಿ ನನ್ನ ದೇಹವನ್ನೂ, ಈ ಕೋಟಿನ ತೋಳಿನಂತೆ ಒಳಮೈ ಹೊರಗಾಗಿ ಬರುತ್ತಿದ್ದ ಅದರ ದೇಹವನ್ನು ಹಿಡಿದು ತರುತ್ತಿದ್ದ ಕಪಿಮುಷ್ಟಿಯನ್ನೂ, ವಿಶ್ವಪ್ರಯತ್ನದಿಂದ ಹೊರಕ್ಕೆಳೆದು ಧುಮುಕೇ ಬಿಟ್ಟೆ ಭೂಮಿಗೆ! ಆದರೂ ಕಿಲಾಡಿ ಹುಲಿ ಅದು ಸ್ವಲ್ಪ ಒದ್ದಾಡಿ ನಿಂತೇ ಬಿಟ್ಟಿತು. ಆದರೇನು, ಚರ್ಮ ಒಳಗೆ-ಮಾಂಸ ಹೊರಗೆ, ಹಲ್ಲು ಹೊರಗೆ-ಮೀಸೆ ಒಳಗೆ...."

"ಬುರುಡೆ ಅನ್ನಬಹುದು ನೀವು. ಬೇಕಾದರೆ ಹೋಗಿ ನೋಡಿ ಹುಲಿಕಲ್ಲಿಗೆ-ಇವತ್ತಿಗೂ ಓಡಾಡುತ್ತಿದೆ ಅದೇ ಹುಲಿ-ಅದೇ ಸ್ಥಿತಿಯಲ್ಲಿ ನನಗಾಗಿ ಕಾಯುತ್ತಿದೆ-ಎಂದು ಬಂದು ತಿರುವಿಹಾಕುತ್ತಾನೋ ಪುಣ್ಯಾತ್ಮ ಅಂತ".

'ಇಷ್ಟು ಬಲವಾದ ಬುರುಡೆ ಬಿಡುವುದಕ್ಕೆ ನಾಚಿಕೆಯಾಗುವುದಿಲ್ಲವೇ ಈ ಘಟಕ್ಕೆ' ಅನ್ನಿಸಿತು. ಆದರೂ ಆತನ ವಾಕ್ಚಾತುರ್ಯಕ್ಕೆ ಸಮ್ಮತ ಹೊಡೆದು ನಾನು ತೆಪ್ಪಗೆ ಕೂತರೆ, ಆತ ಬಿಡಬೇಕಲ್ಲ!

"ಇದಕ್ಕೇನು ಸ್ವಾಮೀ ಇಷ್ಟು ಆಶ್ಚರ್ಯಪಡ್ತೀರಿ. ಇಂಥದ್ದು ನೂರಾರು ಅನುಭವ ಆಗಿದೆ ನನಗೆ. ಇನ್ನೂ ಎಂತೆಂಥ ಕಿಲಾಡಿ ಹುಲಿಗಳಿವೆ ಅಂತೀರಿ ಹುಲಿಕಲ್ ಕಾಡಿನಲ್ಲಿ". (ನನ್ನ

ಮುಖದಲ್ಲಿನ ಬೇಜಾರು, ಆತಳಿಗೆಳನ್ನು ಅಲಕ್ಷಿಸಿ ಮುಂದುವರಿಸಿದ ಪಾಪಿ!)

''ನನಗೆ ರಾತ್ರಿ ಷಿಕಾರಿ ಬಹು ಇಷ್ಟ. ಕಾಡಿನಲ್ಲಿ ಕ್ಯಾಂಪ್ ಮಾಡಿ ವಾರಗಟ್ಟಲೆ ರಾತ್ರಿ ಷಿಕಾರಿ ಮಾಡುವುದುಂಟು ನಾನು. ರಾತ್ರಿ ಹನ್ನೆರಡು ಗಂಟೆಮೇಲೆ ಹೊರಟು ನನ್ನ ಮಾಮೂಲು ಮರದ ಪೊಟರೆಯಲ್ಲಿ ಕೂತು ಸುತ್ತಲೂ ನೋಡುವುದು. ಹಗಲಿಗಿಂತ ಬೇಗ ಪತ್ತೆಯಾಗುತ್ತವೆ ನನ್ನ ಕಣ್ಣಿಗೆ ಹುಲಿಗಳು ರಾತ್ರಿಯಲ್ಲಿ; ಹೊಳಪಾಗಿ ಝಳಪಿಸುವ ಎರಡು ಕಣ್ಣುಗಳೇ ಕಾಣಿಸುವುದು ಅಮಾವಾಸ್ಯೆ ಕತ್ತಲಿನಲ್ಲಿ. ಸರಿಯಾಗಿ ಎರಡು ಕಣ್ಣುಗಳ ಮಧ್ಯಕ್ಕೆ ಗುರಿ ಇಟ್ಟು ಹೊಡೆದು ಬಂದು ಮಲಗಿದರೆ, ಬೆಳಿಗೆದ್ದು ನನ್ನ ಕಡೆಯವರು ಹೋಗಿ ಹುಲಿಯ ಶವ ಎತ್ತಿಕೊಂಡು ಬರುವುದು ನಾನು''.

ನಾನು ಒಂದು ಸಾರಿ ಕಣ್ಣುಜ್ಜಿಕೊಂಡು, ಒಂದು ಆಸ್ಪರಿನ್ ಗುಳಿಗೆ ನುಂಗಿದೆ. ಆತನಿಗೆ ಕರುಣೆ ಬರಲಿಲ್ಲ.

''ಒಂದು ಸಾರಿ, ಹೀಗೇ ಹೊರಟೆ ಶಿಕಾರಿಗೆ. ಮೊನ್ನೆ ಮೊನ್ನೇಂದ್ರೇ. ಹೋಗಿ ಎಂದಿನಂತೆ ಅಮಾವಾಸ್ಯೆ ರಾತ್ರಿ ಗುರಿ ಇಟ್ಟು ಹೊಡೆದು ಬಂದು ಕ್ಯಾಂಪಿನಲ್ಲಿ ಮಲಗಿದೆ. ಬೆಳಗ್ಗೆ ಎದ್ದು ಕಾಡೆಲ್ಲಾ ಹುಡುಕಿದರೂ ಒಂದು ಸತ್ತ ಬೆಕ್ಕಿನ ಶವ ಕೂಡ ಸಿಕ್ಕಲಿಲ್ಲ. ನನ್ನ ಗುರಿ ತಪ್ಪುವುದೆಂದರೆ ಅರ್ಥವೇ ಇಲ್ಲಸ್ವಾಮಿ. ನನಗೆ ರೇಗಿತು-ಆಶ್ಚರ್ಯವೂ ಆಯಿತು. 'ಇರಲಿ, ಮಾಡುತ್ತೇನೆ' ಅಂತ ಮರಳಿ ಯತ್ನಮಾಡಿದೆ ಮಾರನೇ ರಾತ್ರಿ. ಹೆಣ ಬೀಳಲಿಲ್ಲ, ಹೀಗೆ ಮೂರು ರಾತ್ರಿ ವ್ಯರ್ಥವಾದಮೇಲೆ ಒಂದು ಉಪಾಯ ಹೂಡಿದೆ! ಊರಿನಿಂದ ಸಾಹುಕಾರ್ ಸಣ್ಣಯ್ಯನ ಕಾರು ತಂದು ಷಿಕಾರಿ ಸ್ಥಳದಲ್ಲಿ ನಿಲ್ಲಿಸಿದೆವು-ಹುಲಿಗಳು ಇರುತ್ತಿದ್ದ ಸ್ಥಳಕ್ಕೆ ಎದುರಾಗಿ ನಿಲ್ಲಿಸಿದೆವು. 'ರಾತ್ರಿ ಎಂದಿನಂತೆ ನಾನು ಬಂದೂಕು ಬಾರ್ ಮಾಡಿ, ಗುಂಡು ಹಾರಿಸಿದ ಕೂಡಲೆ ಕಾರಿನ ಲೈಟುಗಳನ್ನು ಬೇಟೆ ಸ್ಥಳಕ್ಕೆ ಜೋರಾಗಿ ಬಿಟ್ಟು ಈ ಐಬನ್ನು ಪತ್ತೆ ಹಚ್ಚಬೇಕು' ಅಂತ ಏರ್ಪಾಡಾಯಿತು. ಎಲ್ಲಾ ಸಿದ್ಧವಾಯಿತು ರಾತ್ರಿ ಹೋದೆವು. ಕಾರ್ಗತ್ತಲು. ಎಂದಿನಂತೆ ಎರಡು ಕಣ್ಣುಗಳು ಝಳಪಿಸುತ್ತಿವೆ. ಗುಂಡು ಹಾರಿತು-ಬಿಟ್ಟರು ಭಾರೀ ಲೈಟುಗಳನ್ನು ಎರಡನ್ನೂ. ಪತ್ತೆಯಾಯಿತು ಮರ್ಮ! ಏನು? ಗುಂಡು ಎಲ್ಲಿಹೋಯಿತು ಅಂತ''.


ನನ್ನ ಕುತೂಹಲ ಸ್ವಲ್ಪ ಕೆರಳಿತು. ಆಶ್ಚರ್ಯದಿಂದ ಬಾಯಿ ಬಿಟ್ಟು ಕೂತೆ, ಕಣ್ಣು ಅಗಲಿಸಿಕೊಂಡು.

''ಹುಲಿ ಸಿಕ್ಕಿತು. ಆದರೆ ಒಂದಲ್ಲ-ಎರಡು ಸಿಕ್ಕಿದುವು. ಏನುಮಾಡಿವೆ ಗೊತ್ತೆ? ಒಂದರ ಪಕ್ಕದಲ್ಲಿ ಒಂದು ನಿಂತುಕೊಂಡು, ಒಂದು ಹುಲಿ ಬಲಗಣ್ಣನ್ನೂ, ಒಂದು ಹುಲಿ ಎಡಗಣ್ಣನ್ನೂ ಮುಚ್ಚಿಕೊಂಡಿವೆ. ನಾನು ಹೊಡೆದ ಗುಂಡು ಎರಡು ಕಣ್ಣುಗಳ ಮಧ್ಯೆ ಗಾಳಿಯಲ್ಲಿ ಮಾಯವಾಯಿತು!...... ಹೇಗಿದೆ ಮೈಸೂರು ಹುಲಿಗಳ ಕಿಲಾಡಿತನ?.....''

ಅಷ್ಟರಲ್ಲಿ ನಮ್ಮೂರು ಕೆರೆ ಕಾಣಿಸಿತು. ಚೀಲ, ಚಪ್ಪಲಿ, ಚೊಂಬು ಹುಡುಕಿ ಎತ್ತಿಟ್ಟುಕೊಂಡೆ. ''ಎಲಾ, ಇಷ್ಟು ಗಡವನಾಗಿ, ಎಮ್ಮೆ ಹಾಗಿದ್ದಾನೆ- ಈತ ಚಿಕ್ಕಮಕ್ಕಳಿಗೆ

ಹೊಡೆದಂತೆ ಇಂಥಾ ಭಾರೀ ಬುರುಡೆ ಬಿಡುತ್ತಾನಲ್ಲ...... ಕೊಂಚವೂ ನಯ..... ನಾಚಿಕೆ? ನಂಜನಗೂಡು ಆಚೆಗೆ ಇರಬಹುದು ಇವನ ಹುಟ್ಟು ಸ್ಥಳ'' ಅಂದುಕೊಂಡು ಸ್ಟೇಷನ್ ಕಾಣಿಸುತ್ತಲೂ ಏಳುವುದಕ್ಕೆ ಪ್ರಯತ್ನಿಸಿದ ಕೂಡಲೆ ಹೇಳಿದ;

''ಹೇಗಿದೆ ಸ್ವಾಮಿ ಕತೆಗಳು? 'ಯಾರು ಭಾರೀ ರೀ ಬುರುಡೆ ಬಿಡುತ್ತಾರೆ' ಅನ್ನೋ ಪಂದ್ಯದಲ್ಲಿ ಮೊನ್ನೆ ಈ ಕತೆಗಳನ್ನು ಹೇಳಿ ನಾನು ಆರುದೋಸೆ, ನಾಲ್ಕು ಇಡ್ಲಿಗಳನ್ನು ಗೆದ್ದೆ ನಮ್ಮೂರಿನಲ್ಲಿ. ಬೇಜಾರಾಯಿತೇನೋ ನಿಮಗೆ. ಇನ್ನೊಂದು ಸಾರಿ ಸಿಕ್ಕಾಗ ''ವ್ಯಾಘ್ರ'' ಎನ್ನೋ ಬಿರುದು ಬಂದ ಕತೆ ಹೇಳುತ್ತೇನೆ-ನಮಸ್ಕಾರ.''



''ನನ್ ಸೊಸೇನೂ ಅಷ್ಟೆ, ಮನೆಯೋರ್ಗೆಲ್ಲಾ ಪರಂಗಿ ಹಣ್ಣು ತಿನ್ನಿಸ್ತಾ ಇದ್ದಾಳೆ!''

ಏನೆಂದು ಬೇಡಲಿ ನಿನ್ನ!

-ಕಮಲಾ ರಾಮಸ್ವಾಮಿ

''ಏನೆಂದು ಬೇಡಲಿ ನಿನ್ನ'' ಬಹಳ ಹಳೇ ದೇವರನಾಮ. ಜಯವಂತಿ ದೇವಿಯವರು ಹಾಡಿದ ರೆಕಾರ್ಡು-ರೇಡಿಯೋ ಕಾಲದ ಗೀತೆ, ಬಹುಶಃ ನಮ್ಮ ಕಾಲದವರೆಲ್ಲಾ ಕೇಳೇ ಇರ್ತಾರೆ. ನಲ್ವತ್ತರ ದಶಕದ ಹಾಡು. ''ಏನೆಂದು ಬೇಡಲಿ ನಿನ್ನ ತಾಯೆ! ಏನೆಂದು ಬೇಡಲಿ-ಸಾವಿರಾ ಕೈಗಳು ನಿನ್ನವು ಎರಡೇ ನನ್ನವು....'' ಹೀಗೆಯೇ ದೇವಿಯನ್ನು ಬೇಡುವ ಆ ಹಾಡು, ಬೆಳಿಗ್ಗೆ ಎದ್ದಾರಾಭ್ಯ ಕಿವಿಯಲ್ಲಿ ಗುಯ್ಯಗುಡುತ್ತಿತ್ತು. ಒಂದೇ ಸಮನೆ ಕೆಟ್ಟುಹೋದ ರೆಕಾರ್ಡಿನಂತೆ ಮತ್ತೆ ಮತ್ತೆ ಮೊರೆಯುತ್ತಿದ್ದ ಆ ಪಲ್ಲವಿಯನ್ನು ಸುಮ್ಮನಾಗಿರಿಸಲು ಆಗಲೇ ಇಲ್ಲ. ಘಂಟೆ ಆರೂಕಾಲು. ಸ್ವಲ್ಪ ಬೆಳಕು ಮೂಡಿದೊಡನೆ ವಾಯು ಸೇವನೆಗೆ ಹೊರಟೆ. ಗೇಟ್ ಹಾಕುವಷ್ಟರಲ್ಲಿ ಜಗ್ಗು ಸೈಕಲ್ ಮೇಲೆ ಬಂದ. ''ಸದ್ಯ ಸಿಕ್ಕಿದ್ಯಲ್ಲಾ ದೊಡ್ಡಮ್ಮ.....'' ಅನ್ನುತ್ತಾ ಸೈಕಲ್ಲಿನಿಂದ ಇಳಿದ.

''ಯಾಕೋ, ಏನಾಯ್ತೋ?'' ಗಾಬರಿಯಿಂದ ಕೇಳಿದೆ. ಜಗ್ಗು ಮನೆಯಲ್ಲಿ ಮೂವರು ಮುದುಕರು. ಬೆಳಿಗ್ಗೆ ಎದ್ದು, ಅದೂ ಈ ಪಡ್ಡೆ ಹುಡುಗ, ಈಗಿನ ಕಾಲದಲ್ಲಿ ಬರಬೇಕಾದರೆ ಏನೋ ಆಗಿರ್ಲೇಬೇಕು. ''ಯಾಕೋ'' ಅಂದೆ.

''ಛಿ ಛೀ ಅಂತಾದ್ದು ಏನಿಲ್ಲ'' ಜಗ್ಗು ನಕ್ಕ. ''ಎಲ್ಲರೂ ಚೆನ್ನಾಗಿದ್ದಾರೆ. ಅಮ್ಮ ನಿಮಗೆ Urgent ಆಗಿ ಈ ವಿಚಾರ ತಿಳ್ಸು ಅಂದ್ಲು ಅದ್ಕೇ ಬಂದೆ. ನೀವು ಅದ್ಯಾರೋ ಶ್ರೀ ಶ್ರೀ ಮಹಾಯೋಗಿನಿ ಭೈರವಿದೇವಿಯವರ್ನ ನೋಡ್ಬೇಕು ಅಂದಿದ್ರಂತೆ ಅವರು ಇವತ್ತು ದರ್ಶನ ಅಲ್ಲಾ ಸಂದರ್ಶನ ಕೊಡ್ತಾರಂತೆ. ಎಂಟು ಗಂಟೆ ಒಳಗೆ ಅಲ್ಲಿರಬೇಕು. ಅವರು ಇಳಿಕೊಂಡಿರೋ ಲೇಔಟ್ ಹೆಸ್ರು ಗೊತ್ತಿಲ್ಲ ಊರಾಚೆ ಇದ್ಯಂತೆ. ನಂ ಗೋವಿಂದನ ತಾಯಿ ಹತ್ರ ಅಮ್ಮ ತುಂಬಾ ಹೇಳಿದ್ರಂತೆ ಅವರ್ನ ನೋಡ್ಬೇಕು ಅಂತ. ಅಂದಕ್ಕೆ ಅವ್ರು ಕರಕೊಂಡು ಹೋಗ್ತಿದ್ದಾರೆ. ನೀವೂ ಬರ್ತೀರಾ ಅಂತ ಕೇಳ್ಕೊಂಡು ಬಾ ಗೋವಿಂದ ಕಾರ್ ತರ್ತಾ ಇದ್ದಾನೆ ಏಳು ಗಂಟೆಗೆಲ್ಲಾ ರೆಡಿಯಾಗಿರ್ಬೇಕಂತೆ'' ಎಂದ.

ಅಮ್ಮಯ್ಯಾ! ಎಷ್ಟು ದಿನಗಳಿಂದ ಇದು ಮನಸ್ಸಿನಲ್ಲಿ ಇತ್ತು-ಅವರ್ನ ನೋಡಬೇಕು ಅಂತ ಬಹಳ ಆಸೆಯಿತ್ತು. ''ಹುಂ ಕಣೋ ನಾನೀಗ್ಲೆ ರೆಡಿಯಾಗಿಬಿಡ್ತೀನಿ. ಬರ್ತೀನಿ ಅಂತ ಹೇಳು ಅಮ್ಮಂಗೆ. Thanks ಮರಿ. ಅಂದ್ಹಾಗೆ ನೀನು Phone ಯಾಕೆ ಮಾಡ್ಲಿಲ್ಲ'' ಎಂದೆ.

''ನೆನ್ನೆ ರಾತ್ರಿಯಿಂದ್ಲೇ ನಿಂ ಟೆಲಿಫೋನ್ ಡೆಡ್'' ಅಂದು ಸೈಕಲ್ ಹತ್ತಿ ಹೊರಟ. ಒಳಗೆ ಬಂದೆ. ಯಥಾಪ್ರಕಾರ ಕರೆಂಟು ಇಲ್ಲ. ಅರ್ಧಂಬರ್ಧ ಕಾದ ನೀರಲ್ಲಿ ಸ್ನಾನ ಮುಗಿಸಿ ತಯಾರಾದೆ. ಅಷ್ಟುಹೊತ್ಗೆ ಇವ್ರು ಮುಸುಕೊಳಗಿಂದಲೇ ''ಯಾರೂ'' ಅಂದ್ರು.

''ಇನ್ಯಾರು ನಾನೇ ನೋಡಿ ಆ ಮಹಾದೇವಿ ಭೈರವಿ ದೇವಿಯವರ್ನ ನೋಡುಕ್ಕೆ ಹೋಗ್ತಾ ಇದ್ದೀನಿ. ಜಗ್ಗು ಬಂದಿದ್ದ ಗೌರಿ ಹೋಗ್ತಾಳಂತೆ ನಾನೂ ಹೇಳ್ತಾ ಇದ್ನಲ್ಲಾ ಅದಕ್ಕೆ ಹೇಳಿಕಳಿಸಿದ್ಲು. ನೀವೇ ಕಾಫಿ ಬೆರ್ಸಿಕೊಳ್ತೀರಾ ಇಲ್ಲಾ flaskನಲ್ಲಿ ಹಾಕಿಡಲೆ'' ಅಂದೆ.

ಮುಸುಕು ತೆಗೆದು ''ನಾನೇ ಮಾಡ್ಕೊತೀನಿ ನೀನು ಹೋಗು. ಆದ್ರೆ ಆಕೇನ ಏನು ಕೇಳ್ತಿ? ಅಂದ್ರು.

''ಅದೇ! ಎಲ್ಲರ ಸಂಸಾರದಲ್ಲಿ ಏನು ಕೇಳ್ತಾರೋ ಅದ್ನೆ, ಇರ್ಲಿ ನಂಗೆ ಹೊತ್ತಾಯ್ತು ಒಂದು ಬಾಲ್‌ಪೆನ್ನು ಬರೀತಿಲ್ಲಾರಿ ಥೂ ನಿಮ್ಮದೆಲ್ಲಿದೆ, ನ್ಯೂ ನೋಟ್ ಪ್ಯಾಡ್ ಇಲ್ಲೆ ಇತ್ತು. ಎಲ್ಲಕ್ಕೂ ಹೊತ್ತಿಗೆ ಸರಿಯಾಗಿ ಕಾಲು ಬರುತ್ತೆ ಹುಡುಕಾಡುತ್ತಿರುವಾಗಲೇ ಕಾರ್ ಬಂದೇ ಬಿಡ್ತು. ''ಬರ್ತೀನ್ರೀ'' ಅಂತ ಕೂಗಿ ಹೇಳಿ ಹೊರಟೇ ಬಿಟ್ಟೆ.

ಕಾರ್ನಲ್ಲಿ ಕೂತ ತಕ್ಷಣ ಮತ್ತೆ ನೆನಪಿಗೆ ಬಂತು ಆ ಹಾಡು ಆಹಾ! ಗದ್ದಲದಲ್ಲಿ ಮರ್ತೇ ಹೋಗಿತ್ತು. ''ಗೌರಿ ನೀನು ಏನು ಪ್ರಶ್ನೆ ಕೇಳ್ಬೇಕೂಂತ ಇದ್ದೀ'' ಅಂದೆ.

''ನಿಂಗೊತ್ತಿಲ್ವೆ! ನಂ ಪ್ರಭಂಗೆ ಶ್ರಾವಣಕ್ಕೆ 27 ತುಂಬುತ್ತೆ. ಯಾವ ಗಂಡೂ ಸರ್ರ್ಯಾಗಿ ಸಿಕ್ಕಿಲ್ಲ. ಚಂದ್ರುಗೆ ಬಿ.ಇ. ಪಾಸಾಗಿ ಆರು ವರ್ಷವಾದ್ರೂ ಸರ್ರ್ಯಾದ ಕೆಲ್ಸವಿಲ್ಲ. ಒಂದೇ ಎರಡೇ ಪ್ರಶ್ನೆಗಳು....'' ಗೌರಿ ಮುಗಿಸುವಷ್ಟರಲ್ಲಿಯೇ ರಾಧಮ್ಮ ''ಅಯ್ಯೋ ನೋಡಿ ಗೌರಮ್ಮ, ಮೂರು ಪ್ರಶ್ನೆಗಿಂತ ಹೆಚ್ಚಿಗೆ ಕೇಳೋಹಂಗಿಲ್ಲ'' ಗೋವಿಂದನ ತಾಯಿ ರಾಧಮ್ಮ ಖಡಾಖಂಡಿತವಾಗಿ ಹೇಳಿದ್ರು.

''ಹೌದೇ ರಾಧಮ್ಮ! ಮೂರು ಪ್ರಶ್ನೆ ಮಾತ್ರವೇ'' ಎಂದೆ.

''ಹೌದು ಆಕೆ ಈಚೆಗೆ ಯಾರನ್ನೂ ನೋಡೋದಿಲ್ಲ. ಪ್ರಶ್ನೆಗೆ ಉತ್ರ ಹೇಳೋದೂ ಇಲ್ಲ. ಈ ಬಗ್ಗೆ ಮೂರು ವರ್ಷದಿಂದ ಮೌನವ್ರತದಲ್ಲಿದ್ದರು. ಈಗ ತಾನೇ ಹರಿದ್ವಾರದಿಂದ ಬಂದಿದ್ದಾರೆ. ನಮ್ಮೊರ ಮನ್ಲೇ ಇಳಿಕೊಂಡಿದ್ದಾರೆ. ಪಾಪ ಗೌರಮ್ಮ ಬಾಳ ವದ್ಯಾಡ್ತಾ ಇದ್ರೂಂತ ಹೇಳ್ದೆ....''

''ದರ್ಶನ ಅಂದ್ರ ಏನು? ಹೇಗೆ....ಏನ್ಮಾಡ್ತಾರೆ' ಸ್ವಲ್ಪ ಆತಂಕ, ಚೂರು ಭಯ ಎಲ್ಲಾ ಆಗಿತ್ತು ನನಗೆ. ನಾನು ಯಾವತ್ತೂ ಹೀಗೆ ಜಾತಕ, ಕೈ ನೋಡೋದು, ಕಣಿ ಕೇಳೋದು ಯಾವ್ದನ್ನೂ ನಂಬಲ್ಲ. ಈ Particular ಸನ್ಯಾಸಿನಿ ನನ್ನ Interest ಕೆರಳಿಸಿದ್ದು ಹೀಗೆ. ನನ್ನ ಗೆಳತಿ. ನನ್ನ ಪ್ರಾಣದ ಸ್ನೇಹಿತೆಗೆ ಜೀವನದಲ್ಲಿ ಹಲವಾರು ಸಮಸ್ಯೆ ಬಂದು ಈಕೆಯ ಹೆಸರು ಕೇಳಿ ಹೋದಾಗ ಅವಳ ಪ್ರಶ್ನೆಗಳಿಗೆ ಉತ್ತರ ಸಿಕ್ಕಿ ಜೀವನ ಸುಗಮವಾಯಿತು. ಅಚ್ಚರಿಯ ವಿಷಯವೆಂದರೆ, ಆಕೆಯ ಹತ್ತಿರ ನೀವು ಪ್ರಶ್ನೆ ಕೇಳುವುದಿಲ್ಲ, ಚೀಟಿಯಲ್ಲಿ ಬರೆದು ಕವರಿನಲ್ಲಿ ಹಾಕಿ ಅವರ ಮುಂದಿಟ್ಟರೆ ಸಾಕು. ಅವರು ಅದನ್ನು ನೋಡದೆಯೇ ನಿಮ್ಮ ಪ್ರಶ್ನೆಗೆ ಉತ್ತರಿಸುವರು. ಅದನ್ನು ಕೇಳಿದಾರಾಭ್ಯ ನನಗೆ ವಿಪರೀತ ಕುತೂಹಲವಾಗಿತ್ತು. ಆದರೆ ನಾನೂ ಊರಿನಲ್ಲಿರಲಿಲ್ಲ. ಅವರೂ ಹಿಮಾಲಯಕ್ಕೆ ಹೋಗಿಬಿಟ್ಟರು. ಈಗ ಬಂದಿದೆ ದರ್ಶನ ಭಾಗ್ಯ! ಅದೃಷ್ಟವಲ್ಲದೆ ಮತ್ತೇನು. ರಸ್ತೆಯುದ್ದಕ್ಕೂ ಅವರನ್ನು ಏನು ಕೇಳಲಿ ಎಂಬ ಆಗಾಧ ಪ್ರಶ್ನೆ- 'ಏನೆಂದು ಕೇಳಲಿ ನಿನ್ನ'' ಎಂಬ ಗಾನ ಕೊರೆಯ ಹತ್ತಿತು.

ಹಣ; ಬಹಳ ಮುಖ್ಯವಾದ ಐಟಂ, ಹಣಕಾಸಿನ ಬಾಬತ್ತು ನಂ ಬಾಳ್ನಲ್ಲಿ ಹೇಗಿರುತ್ತೆ ಅಂತ ಕೇಳಿದ್ರೆ? ಛೀ, ಅಲ್ಲಾ ಅದ್ನ ಕೇಳಕ್ಕೆ ಆಕೆ ಅತ್ರ ಹೋಗ್ಬೇಕೆ? ನಿನ್ನ ಬ್ಯಾಂಕ್ ಬ್ಯಾಲೆನ್ಸ್ ನಿಂಗೆ ಗೊತ್ತಿಲ್ವೆ? ಅಲ್ದೆ ಎಣಿಸಿದ ರೊಟ್ಟಿಯಂತೆ ತಂದ ಸಂಬಳದಲ್ಲಿ ಜೀವ್ನ ಮಾಡಿ ಆಪಾತ್ಕಾಲಕ್ಕೆ ಅಂತ ಒಂದಿಷ್ಟು ಇಟ್ಕೊಂಡ್ರೆ ಮುಗೀತು. ಚಾಟಿ ಇಲ್ದೆ ಬುಗರಿ

ಆಷ್ಟೊ ಖ್ಯಾತಿ ಇಲ್ಲ ಕೊಟ್ಟ ಹಣ ಕೇಳೋಕ್ಕೇ ನಾಚಿಕೆ, ದಾಕ್ಷಿಣ್ಯ- ಇನ್ನು ಹಣ ಎಲ್ಲಿಂದ ಬರ್ಬೇಕು ಹೇಳಿ. ನಂ ಯೋಗ್ಯತೆ ನಮ್ಗೆ ಗೊತ್ತಿಲ್ವೇ ಅದ್ನ ಕೇಳೋದೇ? ನಗೆಪಾಟಲು ಬಿಡಿ.

ಹಾಗವ್ರೆ ಆರೋಗ್ಯ ಹೇಗಿರುತ್ತೆ ಅಂತ ಕೇಳ್ಲೆ? ಅದನ್ನ ಡಾಕ್ಟರನ್ನ ಕೇಳ್ಬೇಕು. ಕಾಯಲೆ, ಕಸಾಲೆ ಒಂದೂ ಇಲ್ಲ. ದೇವರ ದಯೆ! ತಿಂದನ್ನ ಅರಗಿಸಿಕೊಂಡು ಮಧ್ಯಾಹ್ನ, ರಾತ್ರಿ ಹಾಯಾಗಿ ನಿದ್ದೆ ಮಾಡ್ಕೊಂಡು ಇದ್ದೀನಿ. ದೇಹದ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಅಂತ ಮೂರು ವರ್ಷದ ಮಗುವಿಗೂ ಗೊತ್ತು. ಅದೂ ಟಿ.ವಿ. ಬಂದಮೇಲೆ ಉಹುಂ ಆ ಪ್ರಶ್ನೆ ಬೇಡ.

ಲಾಟರಿ, ಜಾಕ್‌ಪಾಟ್-ಏನಾದ್ರೂ Chance ಇದ್ಯಾ ಅಂತ ಕೇಳಿದ್ರೆ? ಅದೃಷ್ಟ ಇದ್ರೆ ಬಂದೇ ಬರುತ್ತೆ? ಅಲ್ಲ Bus stand ಗೆ ಹೋದ್ರೆ ಬರೋ ಬಸ್ಸು ಬರೋದೇ ಇಲ್ಲ- ಅಂತ ಜಾಯಮಾನ. ಅಂತಾದ್ದೆಲ್ಲಾ ಕೇಳಬಾರ್ದು ಆಹಾ! ನನ್ನ ಇಬ್ಬರ ಮಕ್ಕಳ ಭವಿಷ್ಯ ಹೇಗೆ ಅಂತ ಕೇಳಿದ್ರೆ ಹ್ಯಾಗೆ? ಹುಚ್ಚಿ; ''ಮಕ್ಕಳ ಭವಿಷ್ಯತೆಗೆ ಕಕ್ಕುಲತೆಗೊಳಬೇಡ, ಭಾಗ್ಯವೆಂತೋ ಅಂತೆ ಜಗದಿ ದಕ್ಕೀತೇಂ ಕುರುಪಾಂಡು ತನಯರ್ಗೆ ರಾಜ್ಯಸುಖ-ದಿಕ್ಕವರಿಗವರೆ ಮಂಕುತಿಮ್ಮ'' ಡಿ.ವಿ.ಜಿ. ಹೇಳಿಲ್ವೆ ಅದಕ್ಕಿಂತ ಏನೇನು ಹೇಳಬಹುದು. ಒಂದು ಪ್ರಶ್ನೆನಾ ಅನ್ಯಾಯವಾಗಿ ಹಾಳು ಮಾಡಿಕೊಳ್ಳಲೇ?

ಇದೆಲ್ಲಾ ಐಹಿಕ! ಇವೆಲ್ಲಾ ನಮ್ಮ ಕೈಲಿದೆ. ಅಧ್ಯಾತ್ಮ, ಆತ್ಮದ ಉದ್ಧಾರದ ಬಗ್ಗೆ ಕೇಳ್ಬೇಕು. ಅದೇ ಸರಿ! ನನಗೆ ಮುಕ್ತಿ ಪ್ರಾಪ್ತಿ, ಇನ್ನೆಷ್ಟು ಜನ್ಮ ಎತ್ತಬೇಕು ಎಂಬೆಲ್ಲಾ ಪ್ರಶ್ನೆ ಕೇಳಿದ್ರೆ ಹೇಗೆ? ಸಾಧನೆ ಮಾಡು ಮಗು ತಪಸ್ಸು, ಜಪ-ತಪ ಮುಕ್ತಿ ಮಾರ್ಗಕ್ಕೆ ಹಾದಿ. ನಿನ್ನ ನೀ ತಿಳಕೋ-ಆನಂದ, ಬ್ರಹ್ಮಾನಂದ ಸಿಕ್ಕೇ ಸಿಗುತ್ತೆ ಅಂತ ಉತ್ತರ ಬರುತ್ತೆ. ಅಲ್ವೇ.... ಅಯ್ಯೋ ರಾಮ, ಅವರ ಆಶ್ರಮ ಬಂದೇ ಬಿಡ್ತಲ್ಲಾ, ಏನು ಗತಿ- ಪ್ರಶ್ನೆಯೇ ಇಲ್ವೇ ಕೇಳುಕ್ಕೆ.

ಆತಂಕ ಪಟ್ಟುಕೊಂಡೇ ಕಾರಿಳಿದೆ. ಗೌರಿ, ರಾಧಮ್ಮ, ದಡಬಡ ಮುಂದೆ ನಡೆದರು. ಅದೊಂದು ದೊಡ್ಡ ಹಾಲ್. ಬೆಂಚು, ಕುರ್ಚಿ ಸಾಲುಸಾಲಾಗಿ ಹಾಕಿದ್ದರು. ಆಲ್ಲಿ ಕೂತೆವು, ನಿಶ್ಯಬ್ದ ಅಂದ್ರೆ ಕೆಳ್ತೀರಾ-ನಿಮ್ಮ ಹೃದಯದ ಬಡಿತ ನಗಾರಿ ಬಡಿತ ಹಾಗೆ ಕೇಳಿಸುವಷ್ಟು ನಿಶ್ಯಬ್ದ ನೀರವ. ಶಾಂತ ವಾತಾವರಣ, ಎಲ್ಲಾ ಪಿಸುಮಾತಿನ ವ್ಯವಹಾರ. ನಾವು ಕೂತ ಎರಡು ನಿಮಿಷದಲ್ಲಿ ಕಾವಿ ಧರಿಸಿದ ಪರಿಚಾರಿಕ ಸನ್ಯಾಸಿ ಒಂದು ಕಾಗದ, ಪೆನ್ಸಿಲ್, ಒತ್ತಿಗೊಂದು ಪುಸ್ತಕ ಕೊಟ್ಟ. ಅದರಲ್ಲಿ ನಿಮ್ಮ Date of birth, Time of Birth, Place of Birth ಇವತ್ತಿನ ತಾರೀಖು, ವೇಳೆ - ಅದಾದನಂತರ 1, 2, 3 ಅಂಕಿ ಅಂಕಿ ಪ್ರಿಂಟ್ ಮಾಡಿತು. ಒಂದು ಪ್ರಶ್ನೆಗೆ ಎರಡೇ ಪಟ್ಟೆ ಲೈನು. ಹೆಚ್ಚು ಉದ್ದದ ಪ್ರಶ್ನೆಗೆ ಅವಕಾಶವಿಲ್ಲ. ರಾಧಮ್ಮ ಗೌರಿ ಸರಸರ ಬರೆದರು. ನನಗಂತೂ ದಿಕ್ಕೇ ತೋಚಲಿಲ್ಲ. ಪೆದ್ದು ಪೆದ್ದಾಗಿ ಬಂದುಬಿಟ್ಟನಲ್ಲಾ ಏನು ಮಾಡಲಿ! ತಕ್ಷಣ ಒಂದು Brain wave ಯಾರಿಗ್ಗೊತ್ತು ನಂ ಅದೃಷ್ಟ ಹೇಗೆ ಅಂತ

ಪ್ರಶ್ನೆ 1. ನಾನು ಪ್ರಧಾನಿ ಅಲ್ಲದಿದ್ದರೂ ಕ್ಯಾಬಿನೆಟ್ ರ್‍ಯಾಂಕಿನ ಮಂತ್ರಿ ಆಗುವೆನೆ?

ಪ್ರಶ್ನೆ 2. ಜ್ಞಾನಪೀಠ ಪ್ರಶಸ್ತಿ ಸಿಗುವುದೇ (ಇಂತಾ Article ಬರೆದದ್ದಕ್ಕೆ!)

ಪ್ರಶ್ನೆ 3. ಈ ನ್ಯೂಕ್ಲಿಯರ್ ಸಂಘರ್ಷದಲ್ಲಿ ಬ್ರಹ್ಮಾಂಡ ಉಳಿಯುತ್ತದೆಯೆ?

ಸ್ಕಾನ್ಸೆನ್‌ನಲ್ಲಿ

-ನಾಗೂಶ್ರೀ ಸೂರಿ

ಎಪ್ಪತ್ತೊಂಭತ್ತರ ಬೇಸಿಗೆಯಲ್ಲಿ ನಾನು ಟ್ರೈನಿಂಗ್‌ಗೆ ಅಂತ ಸ್ವೀಡನ್‌ಗೆ ಹೋಗಿದ್ದೆ. (ಅದೆಷ್ಟು ಸಲಾನಯ್ಯ ನೀನು ಅದನ್ನೆ ಹೇಳಿ ಹೇಳಿ ನಮ್ಮನ್ನ ಕೊರೆಯೋದು? ಅಂತ ಬಯ್ಯಬೇಡಿ) United Nations ನವರು ವ್ಯವಸ್ಥೆ ಮಾಡಿದ್ದ ಆ ಪ್ರೋಗ್ರಾಂನಲ್ಲಿ ಇಂಡಿಯಾನೆ ಅಲ್ಲದೆ ಶ್ರೀಲಂಕಾ, ಜೋರ್ಡಾನ್, ಫಿಲಿಫೈನ್ಸ್ ಅಂತ ಹದಿನಾರು ದೇಶಗಳಿಂದ ಒಟ್ಟು ಹದಿನೆಂಟು ಜನ ಬಂದಿದ್ರು.

ಹೆಚ್ಚು ಕಡಿಮೆ ಎಲ್ಲಾರೂನುವೆ ನನ್ನ ಹತ್ರ ಬಹಳ ಸಲಿಗೆಯಿಂದ ಇದ್ದರೂ ಘನಾದಿಂದ ಬಂದಿದ್ದನಲ್ಲ, ಜಾರ್ಜ್, ಅವನು ಮಾತ್ರ ನನ್ನನ್ನು ತುಂಬಾನೆ ಹಚ್ಚಿಕೊಂಡುಬಿಟ್ಟಿದ್ದ. ವರ್ಷದ ಹಿಂದೇನೇ ಅಂತೆ, ಅವನಿಗೆ ಮದುವೆಯಾಗಿದ್ದದ್ದು. ಸ್ಟಾಕ್ ಹೋಂಗೆ ಬರೋಕ್ಕೆ ಒಂದು ವಾರಕ್ಕೆ ಮುಂಚೆ ಗಂಡು ಮಗು ಆಗಿತ್ತಂತೆ. ಆಕ್ಕಿ ಮೇಲೆ ಆಸೆ, ನೆಂಟರ ಮೇಲೆ ಇಷ್ಟ, ಅನ್ನೋ ಥರಾ ಆಗಿ, ಕೊನೆಗೆ ಪುಗಸಟ್ಟೆ ಫಾರೀನ್ ಚಾನ್ಸ್ ಸಿಕ್ಕಿರೋವಾಗ ಬಿಡಬಾರದು ಅಂದುಕೊಂಡು ಬಂದು ಬಿಟ್ಟಿದ್ದಾನೆ. ಆದರೆ ಬಿಡುವು ಸಿಕ್ಕಾಗಲೆಲ್ಲ ಅವರನ್ನ ಜ್ಞಾಪಿಸಿಕೊಂಡು ಅಳತಾ ಇರತಾನೆ. ಎಷ್ಟೋ ಸಲ ನಾನು ಅವನ ರೂಮಿಗೆ ಹೋಗಿ ಅಯ್ಯೋ ಒಂದು ಹತ್ತುವಾರ ತಾನೇ, ಆಡಾಡಿಕೊಂಡು ಬಂದು ಬಿಡತ್ತೆ. ಅದಕ್ಕೆ ಯಾಕೆ ಸಂಕಟ ಪಡತೀ- ಅಂತ ಸಮಾಧಾನ ಹೇಳಿ ಬರತಾ ಇರತೀನಿ. ಅದಕ್ಕೂ ಬಗ್ಗಲಿಲ್ಲ ಅಂದ್ರೆ ಅಲ್ಲೇ ಅವನ Fridge ಇಂದ ಬೀರ್‌ತೆಗದು, ಒಂದು ಕ್ಯಾನ್ ಅವನಿಗೆ ಕೊಟ್ಟು, ಎರಡು ನಾನು ಕುಡಿದು ಬರತಾ ಇರತೀನಿ.

ಅವತ್ತು ಶನಿವಾರ ನಮಗೆ ಬಿಡುವು. ಬೆಳಿಗ್ಗೆ ಕಾಫಿ, ತಿಂಡಿ ಮಾಡಿಕೊಂಡು ನಾನೂ ಅವನೂ ಅಲ್ಲಿರೋ ಸ್ಕಾನ್ಸೆನ್ ತೋಟ ನೋಡಿ ಬರೋಣ ಅಂತ ಹೊರಟವಿ. ಅಲ್ಲೇ ಸುಮಾರು ಹೊತ್ತು ತಿರುಗಾಡಿದ ಮೇಲೆ ಯಾಕೋ ಸ್ವಲ್ಪ ಕಾಲು ನೋವಾದ ಹಾಗೆ ಆಗಿ ಎಲ್ಲಾದೂ ಕೊಂಚ ಕೂತುಕೊಳ್ಳೋಣವೇ ಅನ್ನಿಸಿತು. ಹುಲ್ಲಿನ ಮೇಲೇನೆ ಕೂತುಕೊಳ್ಳೋಣ ಅಂದರೆ ಹಿಂದಿನ ರಾತ್ರಿ ಮಳೆ ಬಿದ್ದು ನೆಲ ಎಲ್ಲ ಒದ್ದೆ ಆಗಿತ್ತು. ಹಾಗಾಗಿ ಎಲ್ಲಾದರೂ ಬೆಂಚು ಸಿಗತ್ತೇನೋ ಅಂತ ಹುಡುಕಿಕೊಂಡು ಹೋದೆವು.

ಅಷ್ಟು ದೂರ ಹೋದರೆ ಬೆಂಚೇನೊ ಇತ್ತು. ಆದರೆ ಅದು ಖಾಲಿ ಇರಲಿಲ್ಲ. ಒಂದು ಕಡೆ ಯಾವನೋ ಮುದುಕ ಕೂತಿದ್ದ. ಅಯ್ಯೋ, ಅಷ್ಟೇ ತಾನೆ, ನಾವು ಹೋಗಿ ಈ ಕಡೆ ಕೂತರೆ ಆಯಿತು ಅಂದುಕೊಂಡು ಹೋದರೆ....

ಆ ಮುದುಕ ಒಬ್ಬ ಕುಡುಕ. ಆಗಲೇ ಸಖತ್ ಹಾಕಿಬಿಟ್ಟಿದ್ದ ಅನ್ನೋದು ಎದ್ದು ಕಾಣತಾ ಇದೆ. ಜೊತೆಗೆ ಇನ್ನೊಂದು ಬೀರ್ ಕ್ಯಾನ್ ಕೈಯಲ್ಲಿ Open ಮಾಡೂಕ್ಕೆ ಒದ್ದಾಡ್ತಾ ಇದ್ದಾನೆ.

ಥತ್, ಇವನ ಪಕ್ಕ ಏನು ಕೂತ್ಕೊಳ್ಳೋದು ಅಂತ ಅಂದುಕೊಂಡು ನಾವು ಮುಂದೆ

ಹೋದೆವಿ ಅವನ್ನ ಅವನು ನೋಡಿದ ಅಂತ ಕಾಣತ್ತೆ.

""Hey, you there...." ಅಂತ ಕೂಗಿದ,

ನಾನೂ ಜಾರ್ಜೂ ಒಬ್ಬರ ಮುಖ ಒಬ್ಬರು ನೋಡಿದವು ಈಗ ಏನು ಮಾಡೋದು?

''ಹೆದರಕೋ ಬೇಡಿ ನಾನು ಏನೂ ಮಾಡೊಲ್ಲ ಬನ್ನಿ ಪರವಾಗಿಲ್ಲ....''

ಅವನ ತಲೆ, ಅವನ ಕೈನಲ್ಲಿ ಏನೂ ಮಾಡಕ್ಕೆ ತಾನೆ ಆಗುತ್ತೆ? ಮೊದಲೇ ಮುದುಕ. ಜತೆಗೆ ಕುಡಿದು ಬೇರೆ ಇದ್ದಾನೆ- ಅಷ್ಟಕ್ಕೆ ಬಂದರೆ ಜಾರ್ಜ್ ಯಾಕೆ, ನಾನೇ ಒಂದು ಕೊಟ್ಟರೂ ಆಯಿತು, ಮೂರು ದಿನ ಬೇಕು ಎಬ್ಬಿಸೋಕ್ಕೆ. ಆಯಿತು, ತಮಾಷೆ ನೋಡೋಣ ಅಂತ ಹೋದೆವಿ.

''ಎಲ್ಲಿಂದ ಬಂದದ್ದು....?''

''ನಾನು-ಜಾರ್ಜ್ ಅಂತ, ಘಾನಾದವನು, ಟ್ರೈನಿಂಗ್‌ಗೆ ಅಂತ ಇಲ್ಲಿಗೆ ಬಂದಿದ್ದೀನಿ. ಇವನು ಇಂಡಿಯಾ ದೇಶದವನು, ಸೂರಿ....''

''ಸ್ಟಾಕ್ ಹೋಂ ಹ್ಯಾಗನಿಸುತ್ತೆ, ನಿನಗೆ...?''

""Beautiful! very beautiful!!"

''ಮತ್ತೆ ಇಲ್ಲೀನ ಹುಡುಗೀರು....?''

""Smashing! ಕೈ ತೊಳೆದು ಮುಟ್ಟಬೇಕು''

''ಮುಚ್ಕೊ ಬಾಯಿ... ನಾನು ಕೇಳತಾ ಇರೋದು ಇವನನ್ನ... ಥತ್, ಈ ಇಂಡಿಯಾದವರೇ ಹೀಗೆ.... ಎಲ್ಲಾದಕ್ಕೂ ಬಾಯಿ ಹಾಕಿಕೊಂಡು ಬರತಾರೆ''

''ಸೂರಿಸರಿಯಾಗೆ ಹೇಳ್ತಾನೆ, Pops...ನಂದೂ ಅದೇ ಅಭಿಪ್ರಾಯ....''

''ಹಾಗಾದರೆ, ಯಾಕೆ ನೀನು ಯಾವಳನ್ನಾದ್ರೂ ಮದುವೆ ಮಾಡಿಕೊಂಡು ಇಲ್ಲೇ ಇದ್ದು ಬಿಡಬಾರದು...?''

ಹೆಂಡತೀ ಮಗೂ ಅಂದ್ರೆ, ಜಾರ್ಜ್ ಎಷ್ಟು ಹಚ್ಚಿಕೊಂಡಿದ್ದ ಅನ್ನೋದು ನನಗೆ ಗೊತ್ತು. ಆದರೆ ಇವತ್ತು ಯಾಕೋ ಈ ಪ್ರಶ್ನೆ ಕೇಳಿ ಅವನು ಕೊಂಚ ಗಲಿಬಿಲಿ ಆಗಿದ್ದ ಹಾಗೆ ಕಾಣಿಸಿತು.

''ಹಯ್ಯೋ, ನೀನು ಹೇಳೋದೂ ಚೆನ್ನಾಗಿದೆ, ನನ್ನನ್ನ ಯಾರು ಮಾಡಕೋತಾರೆ. ಇಲ್ಲಿ ನೋಡು, ಇಲ್ಲಿ ಈ ಕಿವೀ ಹತ್ರ ಎಷ್ಟೊಂದು ಬಿಳೀ ಕೂದಲು....? ಯಾಕೋ ಕೊಂಚ Reassurance ಬೇಕಿದ್ದವನ ಥರಾ ಆಡ್ತಿದ್ದ.

''ಅದಕ್ಕೇ ನಿನ್ನನ್ನ ಗೂಬೆ ಅಂತ ಅನ್ನೋದು. ಅಲ್ವೊ, ಮುತ್ತು ಕೊಡತಾ ಇರಬೇಕಾದ್ರೆ ನಿನಗೆ ನರತ ಕೂದಲು ಎಷ್ಟು ಅಂತ ಯಾರಾದ್ರೂ ಎಣಿಸತಾ ಇರತಾಳೇನೋ?... ಅಷ್ಟಕ್ಕೂ ಬೇಕು ಅಂದ್ರೆ, ಕೊಂಚ ಬಣ್ಣ ಬಳಕೊಂಡರೆ ಆಯಿತು.''

''ಆದರೆ, ಊರಲ್ಲಿ ನನಗೆ ಹೆಂಡತಿ ಇದ್ದಾಳಲ್ಲ?.....''

''ಹಯ್ಯೋ, ಬಿಡು.. ಅದು ಅವಳ ಹಣೆ ಬರಹ, ಅದಕ್ಕೆ ಯಾಕೆ ಅಷ್ಟು ಯೋಚನೆ? ಎಷ್ಟು ಜನಾ ನಿಮ್ಮ ಆಫ್ರಿಕಾದವರು ಇಲ್ಲ ಹಾಗೆ ಮಾಡಿಲ್ಲ?''

ಈಗಂತೂ ಜಾರ್ಜ್ ನಿಜವಾಗೂ ಧರ್ಮ ಸಂಕಟದಲ್ಲಿ ಸಿಕ್ಕಿಕೊಂಡ ಹಾಗೆ ಕಾಣಿಸಿದ. ಮಾತೇ ಆಡಲೊಲ್ಲ. ನಾನೇ Ice break ಮಾಡೋಣ ಅಂತ,

''ಅವನದು ಆಯ್ತು Pops....ಈಗ ನನಗೆ ಏನು ಹೇಳತೀ?....ನಾನೂ ಹಾಗೆ ಮಾಡಲಾ?''

ಯಾಕೋ ಅವನಿಗೆ ನನ್ನ ಮಧ್ಯಪ್ರವೇಶ ಇಷ್ಟ ಆಗಲಿಲ್ಲ ಅಂತ ಕಾಣುತ್ತೆ, ಹಾಗೆ ಒಂದು ನಿಮಿಷ ನನ್ನನ್ನ ದುರುಗುಟ್ಟಿಕೊಂಡು ನೋಡಿದ.

''ನಿನಗೆ ಮದುವೆ ಆಗಿದೆಯಾ....?''

''ಹುಂ... ಎರಡು ವರ್ಷದ ಕೆಳಗೆ''

''ಸದ್ಯ ನಿನ್ನ ಪುಣ್ಯ. ಇಂಡಿಯಾದಲ್ಲಿ ಹುಟ್ಟಿದ್ದಕ್ಕೆ ಸರಿ ಹೋಯಿತು. ಇಲ್ಲೇನಾದ್ರೂ ಆಗಿದ್ದಿದ್ರೆ ನಿನಗೆ ಹೆಣ್ಣು ಸಿಗತಿತ್ತು ಅಂದುಕೊಂಡ್ಯಾ? Take my advice ನಿಮ್ಮ ಟ್ರೈನಿಂಗ್ ಮುಗಿದ ಕೂಡಲೆ Get back to your woman - By the first flight."

ಅಂತ ಹೇಳಿ, ಇನ್ನು ಜಾಗ ಖಾಲಿ ಮಾಡಿ ಅನ್ನೋ ಥರ ಬೀರ್ ಕ್ಯಾನನ್ನ ಬಾಯಿಗೆ ಎತ್ತಿಕೊಂಡ.

ನಾನೇನೋ ತಮಾಷೇಗೇ ಕೇಳಿದ್ದು. ಆದರೂನೂವೆ ಅದ್ಯಾಕೋ ಕೈತೋರಿಸಿ ಅವಲಕ್ಷಣ ಅಂತ ಅನ್ನಿಸಿಕೊಂಡ ಹಾಗಾಯಿತು, ನನಗೆ ಸದ್ಯ ಜಾರ್ಜ್ ಮುಂದೆ ಹೀಗಾಗಿದ್ದು ಒಳ್ಳೇದು ಆಯಿತು, ಅವನು ಯಾರ ಮುಂದೇನು ಹೀಗೆ ಆಯ್ತು ಅಂತ ಬಾಯಿ ಬಿಡಲ್ಲ. ಆದರೆ, ಅದೇ ಆ ಫಿಲಿಪೈನ್ಸ್‌ನ ಇಸಿಡ್ರೋ, ಅವನು ಇದ್ದಿದ್ರೆ? ಮುಗಿದೇ ಹೋಗಿರೋದು. ಅವತ್ತೇ ಇಂಡಿಯಾಕ್ಕೆ Telex ಹೋಗಿಬಿಟ್ಟಿರೋದು, ನಮ್ಮ ಮನೆ ಅಡ್ರೆಸ್ಸಿಗೆ With a copy to mother-in-law!

ದಾರೀ ಉದ್ದಕ್ಕೂ ಇದೇ ಯೋಚನೆ ಹಾಗಾಗಿ ನಾನು ಏನೂ ಮಾತು ಆಡಲಿಲ್ಲ. ಜಾರ್ಜ್ ಕೂಡ ಅಷ್ಟೆ, ಯಾಕೋ ತುಂಬಾನೆ Silent.

''ಸೂರಿ....' ಇದ್ದಕ್ಕಿದ್ದ ಹಾಗೆ ಮಾತು ಶುರು ಮಾಡಿದ

''ಹುಂ...?''

''ಅಲ್ಲ, ನಾವು ಈ ಕುಡುಕರು ಅಂತೀವಿ...''

''ಹುಂ ??''

''ಅವರಲ್ಲಿ ಕೆಲವರು, Full tight ಆಗಿದ್ರೂ, ಒಂದೊಂದು ಸಲ ಎಷ್ಟು Sensible ಆಗಿ ಮಾತು ಆಡತಾರೆ. ಈವತ್ತು ಈ ಮುದುಕನ್ನೇ ತೊಗೋ...''

ಅವನು ಯಾವುದಕ್ಕೆ Refer ಮಾಡತಾ ಇದ್ದ? ತನ್ನ ಬಗ್ಗೆನೋ, ಅಥವಾ.....?

ಕೃತಿ ಚೌರ್ಯ

-ಚಂಚಲಾ ಶ್ರೀಕಂಠಯ್ಯ

ಪ್ರತಿದಿನವೂ ಬರುವ ಪತ್ರಿಕೆಯನ್ನು ಕಾತುರದಿಂದ ಕಾದು, ಬಂದೊಡನೆ ಅದರ ಮೇಲೆ ಕಣ್ಣಾಡಿಸಿ ನಿರಾಶಳಾಗುವ ಮಾಲಿನಿಯನ್ನು ಕಂಡು ರಾಯರು ಆಶ್ಚರ್ಯಗೊಂಡರು. ಬಹುಶಃ ತಮ್ಮ ಮನೆಯ ಮೇಲೆ ಶೆಲ್ ಧಾಳಿ ನಡೆದರೂ ರಾಯರು ಆಶ್ಚರ್ಯಗೊಳ್ಳುತ್ತಿರಲಿಲ್ಲವೇನೊ - ಆದರೆ ಮಾಲಿನಿಗೆ ಇದ್ದಕ್ಕಿದ್ದಂತೆ ಪತ್ರಿಕಾ ವ್ಯಾಮೋಹ ಹುಟ್ಟಿದ್ದು, ಅವರನ್ನು ಏನೆಲ್ಲಾ ಯೋಚಿಸುವಂತೆ ಮಾಡಿತು. ಮೆದುಳು ಗರಗಸದಂತೆ ಕಸರತ್ತು ಮಾಡಿತು. ಅವರು ಕಂಡಂತೆ ಮಾಲಿನಿ, ಜೀವಿತದಲ್ಲೆಂದೂ ಪತ್ರಿಕೆಯನ್ನು ಹಿಡಿದು ಓದಿದ್ದು ನೆನಪಿಲ್ಲ. ಅಂತದರಲ್ಲಿ ಪತ್ರಿಕೆಗೆ ಮಾಲಿನಿ ಕರ ಸೇವೆಯನ್ನು ಅರ್ಪಿಸುವುದು ದಿನವೂ ಪುನರಾವರ್ತನೆಗೊಂಡಾಗ ರಾಯರು ತಮ್ಮ ಕೆಟ್ಟ ಕುತೂಹಲವನ್ನು ಹತ್ತಿಕ್ಕಲಾರದೆ ಒಂದು ಶುಭಗಳಿಗೆಯಲ್ಲಿ ಸ್ಫೋಟಿಸಿಯೇಬಿಟ್ಟರು. ''ಏನ್ ಸಮಾಚಾರ ಮಾಲಿ, ದಿನವೂ ಪತ್ರಿಕೆಗೆ ಸೇವೆ ಮಾಡುತ್ತಿದ್ದೀಯಲ್ಲಾ'' ಎಂದು ತಮ್ಮ ಸಹಾಯ ಹಸ್ತ ನೀಡಲು ಮುಂದಾದರು. ಪಾಪ! ಮಾಲಿನಿ ತಾನೆ ಎಷ್ಟು ದಿನಾಂತ ಚೊಚ್ಚಿಲು ಸಂಭ್ರಮದ ಆತಂಕವನ್ನು ಮುಚ್ಚಿಡಲು ಸಾಧ್ಯ. ಗಂಡನಿಗಿಂತಲೂ 'ಆಪತ್ ಬಂಧು' ಉಂಟೇ ಈ ಜಗದಲ್ಲಿ. ಆತ ಗಂಡನೂ ಆಗಬಲ್ಲ... ಗಂಡಾಂತಕಾರಿಯೂ ಆಗಬಲ್ಲಂತ ಫ್ಲೆಕ್ಸಿಬಿಲಿಟಿ ಹೊಂದಿರುವವನು. ತೋಡಿಕೊಂಡಳು ತನ್ನೆಲ್ಲಾ ಆತಂಕವನ್ನು! ''ಅದೇರೀ, ಹದಿನೈದು ದಿನದ ಹಿಂದೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತಲ್ಲಾ ನನ್ನ ಲೇಖನ, ಅದರ ಓದುಗರ ಪ್ರತಿಕ್ರಿಯೆಗಾಗಿ, ಈ ತಡಕಾಟ, ಬೆದಕಾಟ ನಡೆದಿದೆ'' ಅಂದ್ಲು. ''ಅಯ್ಯೋ! ಇಷ್ಟೇನೇ.....'' ಎಂದುಕೊಂಡ್ರು ರಾಯರು ಸ್ವಗತದಲ್ಲಿ. ''ಬಿಡೇ... ಮಾಲಿ, ಯಾಕಿಷ್ಟು ಒದ್ದಾಡುತ್ತೀಯ ಏನಾದರೂ ಅಕಸ್ಮಾತ್ ಬಂದ್ರೆ ನಾನು ಹೇಳುತ್ತೇನೆ ಎಂದು ಅವಳಿಗೆ ತಾತ್ಕಾಲಿಕ ಉಪಶಮನ ಮಾಡಿದ್ರು. ಅಂತೂ ಅವಳ ಬೆದಕಾಟಕೊಂದುದಿನ ಅಂತ್ಯ ಕಂಡಿತು. ಪತ್ರಿಕೆಯ ಒಂದು ಮೂಲೆಯಲ್ಲಿ ಅವಳ ಲೇಖನಕ್ಕೆ ಮಹಾಶಯರೊಬ್ಬರು ಪ್ರತಿಕ್ರಿಯಿಸಿದ್ದರು. ಅದರ ಮೇಲೆ ಕಣ್ಣಾಡಿಸಿದಂತೆ, ಆವಳ ದುಂಬಿ ಕಂಗಳು ಕೆಂದಾವರೆಯಂತೆ ಅರಳಿತು. ಹುಬ್ಬು ಸಂಕುಚಿತಗೊಂಡಿತು. ಆಗಷ್ಟೇ ಬಂದ ಪತ್ರಿಕೆಯನ್ನು ರೊಯ್ಯನೆ ರಾಯರೆಡೆಗೆ ರೀಬೌಂಡ್ (Rebound) ಮಾಡಿದಳು. ಚೆಂಡನ್ನು ಹಿಡಿದು ಅನುಭವವಿದ್ದ ರಾಯರು ಅದನ್ನು ಔಟ್ ಆಗಲು ಬಿಡದೆ ಕ್ಯಾಚ್ ಹಿಡಿದೇಬಿಟ್ಟರು. ಅದರ ಮೇಲೆ ಕಣ್ಣಾಡಿಸಿದಾಗ ಅವರ ಬಿಳಿ ಮೀಸೆ ಕುಲುಕಾಡಿತು.

ಏನ್ರೀ ಸಂಪಾದಕರೇ,

ನಿಮ್ಮ 'ನಿಯತ್ತು' ಪತ್ರಿಕೆ ಯಶಸ್ವಿಯಾಗಿ ಮುಂದುವರೆಸುಕೊಂಡು ಹೋಗಲು ಕೆಲವು ನಿಯತ್ತುಗಳನ್ನು ನಿಮ್ಮ ಪತ್ರಿಕೆ ಅನುಸರಿಸಬೇಡವೇ! ನನಗೆ ನಿಮ್ಮ ನಿಯತ್ತಿನ ಬಗ್ಗೆ ಗಾಢ ಗುಮಾನಿ ಬರುತ್ತಿದೆ. ನಾನು ಬರೆದು ಪ್ರಕಟಿಸಿದ್ದ ''ಕೃತಿಚೌರ್ಯ'' ಲೇಖನದ ಪ್ರತಿಯೊಂದೂ ಪದ, ವಾಕ್ಯ, ವ್ಯಾಕಾರ್ಥವೂ ''ಕೃತಿ'' ನಾಮದವರಿಂದ ಸಾರಾಸಗಟಾಗಿ

ಅಪಕೃತವಾಗಲ್ಪಟ್ಟಿದೆ. ಇದು ಕೊಲೆ ಗುಡಕೃತ್ಯಕ್ಕಿಂತ ಹೇಯ ಕೃತ್ಯ - ಕಾನೂನು ಬಾಹಿರ ಮತ್ತು ಖಂಡನೀಯ. ಇದಕ್ಕೆ ಕಾನೂನು ರಿತ್ಯಾ ಶಿಕ್ಷೆ ಆಗಬೇಕು. ಇದಕ್ಕಾಗಿ ಸಾಕ್ಷಿ, ಆಧಾರ, ದಾಖಲಾತಿಯನ್ನು ಈ ಪತ್ರದೊಂದಿಗೆ ಲಗತ್ತಿಸುವೆ.

ಇಂಥಾ ಖಂಡನೀಯ ಕೃತಿಗಳನ್ನು ಖಡಾಖಂಡಿತವಾಗಿ ಶಿಕ್ಷಿಸಿ, ಬಹಿಷ್ಕರಿಸುವುದನ್ನು ಎದುರು ನೊಡುತ್ತಿರುತ್ತೇನೆ.

'ನಿಯತ್ತ'ನ್ನು ನಿಯತ್ತಿನಿಂದ ಓದುವ

ಎಂದಿತ್ತು. ಮೊನ್ನೆ-ಮೊನ್ನೆಯಷ್ಟೆ ರಾಯರ ಹಸ್ತಾಕ್ಷರವನ್ನು ತನ್ನ ''ಬೋಳಾರ್'' ಕೈಚಳಕಿನಿಂದ ಚೌರ್ಯಮಾಡಿದ, ಆಫೀಸಿನ ಗುಮಾಸ್ತ ರಾಯತನ್ನು ಪೇಚಿಗೆ ಸಿಲುಗಿದ ಪ್ರಸಂಗ ಮುಗಿಯದ ಕೇಸಿನ ''ಕಥೆ''ಯಾಗಿ ಹರಿಯುತ್ತಿರುವುದು ಮಾಲಿನಿಗೆ ತಟ್ಟನೆ ನೆನಪಿಗೆ ಬಂದು. ಎದೆಯಲ್ಲಿ ಅವಲಕ್ಕಿ ಕುಟ್ಟಿದ ಅನುಭವ ಆಯಿತು. ಪಾಪ (ಚೌರ್ಯ ವೃತ್ತಿಯಲ್ಲಿ ಪಳಗದ ಆ ಗುಮಾಸ್ತ, ತನ್ನ ವೃತ್ತಿ ಜೀವನಕ್ಕೆ ಕಳಂಕ ತಂದುಕೊಂಡಂತೆ, ಈ ಮಹಾಶಯನ ಚೌರ್ಯದ ಅಪವಾದ ತನ್ನ ಸಾಹಿತ್ಯ ಬದುಕಿಗೆ ಮಾರಕವಾದರೇನು ಗತಿಯೆಂದು ಮಾಲಿಗೆ ನಡುಗಿದಳು. ಹೀಗಾಗಬಹುದೆಂದು ಕನಸು-ಮನಸ್ಸಿನಲ್ಲೂ ಎಣಿಸಿರಲಿಲ್ಲ ತಾನು ಮಾಡಿದ ಅಪರಾಧವೇನೆಂದೇ ಅರಿಯಲು ಅಸಮರ್ಥಳಾದಳು. ಇಂಥಾ ಬೆದರಿಕೆಗಳು ಸಾಹಿತಿಗಳಿಗೆ ಮಾಮೂಲಿನ ತುಟ್ಟಿಭತ್ಯತಾನೆ ಎಂದು ಧೈರ್ಯ ತಂದುಕೊಂಡರೂ, ಕೈ-ಕಾಲು ನಡುಗುವುದು ನಿಲ್ಲಲಿಲ್ಲ. ಮಾಲಿನಿಯ ಬುದ್ಧಿ ಮುಂದಿನ ಯೋಜನೆಗೆ ಲೆಕ್ಕಹಾಕಿದರೆ, ಮನಸ್ಸು ಹಿಂದಿನದನ್ನು ಯೋಚಿಸುವುದು, ಅವಳ ಮನಸ್ಸು-ಬುದ್ಧಿಯ ಕೋ- ಆರ್ಡಿನೇಷನ್.

ಸಾಹಿತಿಗಳು ಮಾತ್ರ ಕಳ್ಳರಾಗಬಲ್ಲರೋ! ಅಥವಾ ಕಳ್ಳರು ಸಾಹಿತಿಗಳಾಗಬಹುದೊ...ಕಳ್ಳರು ಸಾಹಿತಿಗಳಾಗುವುದು ಎಂದು ಹೇಳಲು ಬಾರದಿದ್ದರೂ ಅವರು ಸಾಹಿತಿಗಳಿಗೆ ಸಾಮಗ್ರಿಗಳನ್ನು ಒದಗಿಸುತ್ತಾರೆಂಬುದಂತೂ ನಿಜ. ಈ ಕೃತ್ಯ ಈ ಕೃತಘ್ನಯುಗಕ್ಕೆ ಮಾತ್ರ ಸೀಮಿತವಾಗಿಲ್ಲ, ಇದು ಪುಣ್ಯಯುಗಗಳ ಪರಂಪರೆಯೇ ಆಗಿದೆ. ಆದಿ ಪಂಪಕವಿಯಿಂದ ಹಿಡಿದು, ಕಂಪ್ಯೂಟರ್ ಯುಗದ ಮಾಲಿನಿಯವರೆಗೂ ಒಂದಲ್ಲ ಒಂದು ರೀತಿಯಲ್ಲಿ ಕೃತಿ ಚೌರ್ಯ ನಡೆಯುತ್ತಲೇ ಸಾಗಿವೆ. ಇಂಗ್ಲೀಷ್‌ನಲ್ಲಿ ಪ್ಲೇಜಿಯಾರಿಜಮ್ (Plagiarism) ಎಂದು ಕರೆಸಿಕೊಳ್ಳುವ ಈ ಕೃತ್ಯ ಶತಮಾನದ ಹಿಂದೆ ಇಂಗ್ಲೇಂಡಿನ ಕವಿಗಳಲ್ಲಿ ಏನೆಲ್ಲಾ ಕ್ರಾಂತಿಯನ್ನು ಅಲೆಯನ್ನು ಎಬ್ಬಿಸಿಲ್ಲ. ಇಷ್ಟೆಲ್ಲಾ ಯಾಕೆ, ಈ ಕೃತ್ಯಕ್ಕಿಂತ ಗಟ್ಟಿಯಾದ, ಅಮೂಲ್ಯವಾದ ಮಾನವನ ಅಂಗಾಂಗಗಲಾದ ಮೂತ್ರಪಿಂಡ, ನೇತ್ರ ಮುಂತಾದ ಅವಯವಗಲನ್ನು ಅದರ ಯಜಮಾನನಿಗೂ ಸುಳಿವು ಹತ್ತದಮತೆ ಚೌರ್ಯಮಾಡಿ ರಪ್ತು ಮಾಡಿ, ತಮ್ಮ ಜೇಬನ್ನು ದಪ್ಪ ಮಾಡಿಕೊಂಡಿಲ್ಲ! ದಕ್ಷಿಣ ಅಮೆರಿಕರೆಯ ಜಿಮನ್ಸ್‌ನ ಕಣ್ಣನ್ನು, ಮರದಿಂದ ಪಣ್ಣು ಲಪಟಾಯಿಸುವಷ್ಟೆ ಸುಲಭದಲ್ಲಿ, ಅವನು ನೋಡುತ್ತಿದ್ದಂತೆ ಕಳುವು ಮಾಡಿದ್ದು ಈಗ ಹಳೆಯ ಸುದ್ದಿ!! ಅದು ಕಣ್ಣಿನ ಮಾಲಿಕನಿಗೆ ಮತ್ತು ಅದನ್ನು ಕದ್ದ ಕಳ್ಳನಿಗೆ ಮಾತ್ರ ಸಂಬಂಧಿಸಿದ್ದೆಂದು ಯಾರು ದನಿ ಎತ್ತಲಿಲ್ಲ. ಇಂತಹ ಜಗದಲ್ಲಿ ಮಾಲಿನಿಯ ಪ್ರಥಮ

ಲೇಖನಕ್ಕೆ ದಂತಭಾಗ್ಯವಾದದ್ದು, ತೀರ ವಿಪರ್ಯಾಸವೆಂದೇ ಅವಳವಾದ. ಇದು ಶುರುವಾದದ್ದಾದರೂ ಹೇಗೆ ಎನಂತೀರಾ?

ಆಧುನಿಕಪರ್ಯಾಯತೆಗೆಹೆಸರಾದ''ಕ್ಯೂ'' ಮೂಲದಿಂದ. ಈ ಕ್ಯೂ ಶಬ್ದ ಶಿಶು ಭೂಮಿಗೆ ಬೀಳುವ ಮೊದಲೇ ಹುಟ್ಟಿಕೊಂಡಿರುತ್ತೆ. ನರ್ಸಿಂಗ್ ಹೋಂನಲ್ಲಿ ಲೇಬರ್‌ವಾರ್ಡನ್ ''ಕಾಟುಸುವುಕೆ''ಯಿಂದ ಶುರುವಾಗಿ, ಅದು ಹುಟ್ಟುವ ಮುಂಚೆ ಕುಲಾವಿ ಹಾಕುವಂತೆ ಒಂದು ಪ್ರತಿಷ್ಠಿತ ಶಾಲೆಯಲ್ಲಿ ಸೀಟು ದಕ್ಕಿಸಿಕೊಳ್ಳುವರೆಗೂ ಹರಿದು ಬರುತ್ತೆ. ಇನ್ನೂ ಮುಂದೂ ಹರಿದು ಹೋಗುತ್ತೆ. ಈಗ ಆ ವಿಷಯ ಇಷ್ಟು ಸಾಕು. ಮಾಲಿನಿಗೆ ಮಂಬುದ್ಧಿ ಜಾಸ್ತಿ. ಅದರೊಂದಿಗೆ ''ಪೋರ್‌ಸೈಟೆಡ್'' ಸೇರಿಸಿಬಿಟ್ಟಿರುವುದರಿಂದ ಬಹಳ ಕ್ರಿಯಾಶೀಲೆ. ದುಡಿಯುವ ಸೊಸೆ ಗರ್ಭಿಣಿ ಎಂದು ತಿಳಿದ ಕ್ಷಣದಿಂದ ಈ ಕ್ರಿಯಾಶೀಲತ್ವ ಇನ್ನೂ ತೀಕ್ಷ್ಣವಾಗಿ ಕೆಲಸ ಮಾಡುತ್ತಿದೆ. ಅಜ್ಜಿ ಪಟ್ಟ ಬಂದ ಮೇಲೆ ಮುಂದೆ ತಾನೆ ಮಗುವಿಗೆ ಬೇಬಿ ಸಿಟರ್ ಮತ್ತು ಗೌವ್ವರ್ನೆನ್ಸ್ ಎಲ್ಲಾ ಆಗಬೇಕು ಅನ್ನೋದು ಮಾಲಿನಿಗೆ ಚೆನ್ನಾಗಿ ಗೊತ್ತು ಮೂರು ಬೀದಿಯಾಚೆ ಇದ್ದ ಪ್ರತಿಷ್ಠಿತ ಸ್ಕೂಲಿನಲ್ಲಿ 2001ನೇ ಇಸವಿಯವರೆಗೂ, ಸೇರ್ಪಡೆಯಾಗಿ ಮಕ್ಕಳ ಹೆಸರನ್ನು ಮತ್ತು ಹುಟ್ಟಲಿರುವ ಮಗುವಿನ ಹೆಸರನ್ನೂ ನೊಂದಾಯಿಸಲಾಗುತ್ತೆ ಎಂಬ ಸುದ್ದಿ ಕಿವಿಗೆ ಬಿದ್ದದ್ದೇ, ಅವಳ ಚುರುಕುಬುದ್ಧಿ ಚುರುಕಾಯಿತು. ಒಂದು ಬೆಳಂ ಬೆಳಗ್ಗೇನೇ ಮಾಲಿ ಸೊಸೆಯೊಂದಿಗೆ ಅರ್ಧ ಕಿ.ಮೀ ದೂರ ಇದ್ದ ಕ್ಯೂನಲ್ಲಿ ಉಪಸ್ಥಿತಳಾದಳು. ಕಣ್ಣುಗಳು ನಿಂತಿದ್ದವರ ವೈವಿಧ್ಯಪೂರ್ಣ ಹಿಂಬದಿಯನ್ನು ನೇವರಿಸುತ್ತಿದ್ದಾಗ, ಅವಳ ಹಿಂಬದಿಯ ಮೇಲೆ ಧೊಪ್ಪೆಂದು ಒಂದು ಭಾರವಾದ ಕೈಬಿತ್ತು. ಬೆಚ್ಚಿ ಹಿಂತಿರುಗಿದಾಗ ಅವಳ ಚಿಕ್ಕಂದಿನ ಸ್ನೇಹಿತೆ ನಿಂತಿದ್ದಳು. ಕ್ಷೇಮ ಸಮಾಚಾರದೊಂದಿಗೆ ಸಾಹಿತ್ಯ ಚರ್ವಿತ-ಚರ್ವಣವೂ ನಡೆಯಿತು. ಗೆಳತಿ ''ನೋಡೆ! ಮಾಲಿ, ನೀನು ಬರೆಯುವ ಅಭ್ಯಾಸವನ್ನು ಕಾಲೇಜ್‌ಡೇಸ್‌ನಿಂದ ಬೆಳೆಸಿಕೊಂಡು ಬಂದಿದ್ದೀಯಾ. ಇದರಲ್ಲಿ ನೀನು ಅನುಭವಸ್ಥಳು. ಹೊತ್ತು ಹೋಗುವುದಿಲ್ಲಾಂತ ನಾನು ಈಗೀಗ ಬರೆಯಲು ಶುರುಮಾಡಿದ್ದೇನೆ. ಬಾರೆ ಮನೆಗೆ ನಾನು ಬರೆದ ಲೇಖನ ತೋರಿಸ್ತೇನೆ. ನಿನ್ನ ಸಲಹೆಯನ್ನು ಕೊಡುವಂತೆ ಅಷ್ಟರಲ್ಲಿ ಈ ಉದ್ದ ಕ್ಯೂ ಕರಗಿರುತ್ತೇ'' ಎಂದು ಪುಸಿ ಹೊಡೆದು ಪಕ್ಕದಲ್ಲಿದ್ದ ಮನೆಗೆ ಕರೆದುಕೊಂಡು ಹೋಗಿ ಬಿಸಿ ಬಿಸಿ ಕಾಫಿಯನ್ನೂ ಹಸಿ-ಹಸಿ ಲೇಖನವನ್ನು ಕೈಗಿತ್ತಳು. ಈಚೆಗೆ ಗಣಪತಿ ವಿಗ್ರಹಗಳು ಹಾಲನ್ನು ಹೀರಿಕೊಂಡಂತೆ, ಮಾಲಿನಿಯೂ ಕಾಫಿಯನ್ನು ಹೀರುತ್ತಾ, ಓದಲು ಕ್ಲಿಷ್ಟವಾದ ಲೇಖನವನ್ನು ಅರಿಗಿಸಕೊಳ್ಳಲು ಯತ್ನಿಸಿದಳು. ಅಲ್ಲಿ-ಇಲ್ಲಿ ಕೆಲವೊಂದು ಬದಲಾವಣೆಯನ್ನು ಮಾಲಿನಿ ಲೇಖನಕ್ಕೆ ಶಿಫಾರಸ್ಸು ಮಾಡಿದ್ದು ಸ್ನೇಹಿತೆಗೆ ಅರ್ಥವಾಗದೇ ''ಅದನ್ನು ನೀನೆ ಮಾಡಿ; ನಿನಗಿಷ್ಟ ಬಂದ ಪತ್ರಿಕೆಗೆ ಕಳುಹಿಸೆ'' ಎಂದು ಪರವಾನಗಿ ಕೊಟ್ಟು, ಮಾಲಿನಿಯನ್ನು ಹೊರಗಟ್ಟಿದಳು.

ಮುಂದೆ ಮಾಲಿನಿ ಆ ಮಹಾನ್ ಕೃತಿಗೆ ಅಲ್ಲಿ-ಇಲ್ಲಿ ಚೌರ ಕಾರ್ಯ ಮಾಡಿ ತನ್ನ ಕೃತಿ ನಾಮದಲ್ಲೇ ಪೋಸ್ಟ್ ಮಾಡಿದ್ದಳಷ್ಟೇ! ಅಷ್ಟಕ್ಕೇ ಇಷ್ಟೆಲ್ಲಾ ಅಪಕೀರ್ತಿ ಅಪವಾದದ ಹೊರೆ ಹೊರಬೇಕಗುತ್ತದೆಂದು ಅವಳು ಕನಸು-ಮನಸ್ಸಿನಲ್ಲೂ ಎಣಿಸಿರಲಿಲ್ಲ!

ಸೀಜನ್ ಮುಗಿಯಿತು

-ಕಂ.ಭಂ. ಕೃಷ್ಣಮೂರ್ತಿ

ಪಕ್ಕದ ಮನೆ ನಾಗಜ್ಜಿ, ಮುಸ್ಸಂಜೆಯಲ್ಲಿ ವೆಂಕಮ್ಮನನ್ನು ಹುಡುಕಿಕೊಂಡು ಆತಂಕದಿಂದಲೇ ಬಂದರು. ''ಕೇಳಿದ್ಯೇನೆ ವೆಂಕು. ಬೆಂಗಳೂರಿನಾಗೆ ಕೂಗುಮಾರಿ ಮಧ್ಯರಾತ್ರೀಲಿ ಮನೆಗೆ ಬಂದು ಹೆಸರು ಹಿಡಿದು ಕೂಗುತ್ತಂತೆ. ಅಪ್ಪಿತಪ್ಪಿ ನಾವು ಜವಾಬು ಕೊಟ್ರೆ ನಮ್ಮ ಕಥೇ ಮುಗೀತೂಂತ್ಲೆ ಅರ್ಥ. ನೀನು ಬಲು ಹುಷಾರಾಗಿರಬೇಕುಕಣೆ'' ಎಂದು ನಾಗಜ್ಜಿ ಹೇಳಿದಾಗ ವೆಂಕಮ್ಮನಿಗೆ ದಿಕ್ಕೇ ತೋಚಲಿಲ್ಲ. ''ನಮ್ಮ ಹೆಸರು ಅದಕ್ಕೆ ಹ್ಯಾಂಗೆ ತಿಳಿಯುತ್ತೆ ನಾಗಜ್ಜಿ'' ಎಂದು ಮುಗ್ಧಳಂತೆ ಅವಳು ಕೇಳಿದಳು.

''ಅಯ್ಯೋ ಹುಚ್ಚುಗಯ್ಯನೆ ಕೂಗುಮಾರಿಗೆ ಗೊತ್ತಿಲ್ಲದೆಯಿರೋ ವಿಷಯ ಯಾವುದಿದ್ಯೆ? ನಿನ್ನ ವಂಶದ ಹೆಸರೆಲ್ಲಾ ಅದಕ್ಕೆ ಗೊತ್ತಿರುತ್ತೆ. ರಾತ್ರಿ ಹೊತ್ತು ಯಾರು ಕದ ತಟ್ಟಿದರೂ ಬಾಗಿಲು ತೆಗೀಬ್ಯಾಡ. ಯಾರಾದ್ರು ಕೂಗಿದ್ರೂ ಜವಾಬು ಕೊಡಬ್ಯಾಡ. ಜಾಗ್ರತೆಯಾಗಿರೋ ಹಾಂಗೆ ಗುಂಡಪ್ಪನಿಗೂ ಹೇಳು.'' ಎಂದು ನಾಗಜ್ಜಿ ಎಚ್ಚರಿಕೆ ಕೊಟ್ಟಾಗ ''ನಮ್ಮ ಕೃಷ್ಣಾಚಾರ್ಯರಿಗೆ ಹೇಳಿ ಒಂದು ಶಾಂತಿ ಹೋಮ ಮಾಡಿಸಿದ್ರೆ ಸಾಲ್ದೇನಜ್ಜಿ'' ಎಂದು ವೆಂಕಮ್ಮ ಕೇಳಿದಳು. ''ನಿನ್ನ ತಲೆ, ಹೋಮ ಗೀಮಕ್ಕೆ ಬಗ್ಗೂ ಅಂತ ಘಟ ಅಲ್ವೆ ಅದು. ಮುಂಭಾಗದಲ್ಲಿ ಲಕ್ಷಣವಾಗಿ ನಾಮ ಇಟ್ಟು ಕೆಳಗೆ 'ನಾಳೆಬಾ' ಅಂತ ಬರಸು. ಅದನ್ನ ಓದಿಕೊಂಡು ತೆಪ್ಪಗೆ ಮಾರಿ ಹೊರಟುಹೋಗುತ್ತೆ. ಎಲ್ಲಾ ಹೀಗೆ ಮಾಡ್ತಿದಾರೆ.'' ಎಂದು ಪರಿಹಾರೋಪಾಯವನ್ನು ವೆಂಕಮ್ಮನಿಗೆ ಉಪದೇಶಿಸುತ್ತಿರುವಂತೆಯೆ, ಕೃಷ್ಣಾಚಾರ್ರು ದುಡುದುಡು ಓಡಿಯೇ ಬಂದರು. ಬಂದವರೇ ಏದುಸಿರು ಬಿಡುತ್ತಾ ಹಾಲಿನಲ್ಲಿದ್ದ ಸೋಫಾದಲ್ಲಿ ಕುಳಿತು, ಉತ್ತರೀಯದಿಂದ ಗಾಳಿ ಹಾಕಿಕೊಂಡು ಒಂದು ನಿಮಿಷ ಸುಧಾರಿಸಿಕೊಂಡರು.

''ಇದೇನು ವೆಂಕಮ್ಮ ಊರ ಮಂದಿಯೆಲ್ಲಾ ಬಾಗಿಲ ಮ್ಯಾಲೆ ಬರದಾರೆ. ನೀವು ಏನೂ ಬರೆಸಿಲ್ಲ...'' ಎಂದು ಆತಂಕದಿಂದ ಕೇಳಿದರು. ನಿಮ್ಮ ಗುಂಡಪ್ಪನಿಗೆ ಹೇಳಿ 'ನಾಳೆಬಾ' ಅಂತ ಮುಂಬಾಗಿಲಮ್ಯಾಲೆ ಒಂದು ಪಂಕ್ತಿ ಬರೆಸಿ ಹಾಕಿಸಿ. ಏನಾರ ಅನಾಹುತವಾಗೂ ಮೊದಲು ಈ ಕೆಲ್ಸ ಮಾಡ್ಸಿ.'' ಎಂದು ಕೃಷ್ಣಾಚಾರ್ಯರು ಸಲಹೆಯಿತ್ತರು. ''ಅಯ್ಯೋ ನಮ್ಮ ಗುಂಡನಿಗೆ ಇದರ ಮೇಲೆಲ್ಲಾ ನಂಬಿಕೆಯಿಲ್ವಲ್ಲಾ ಆಚಾರ್ರೆ...'' ಎಂದು ವೆಂಕಮ್ಮ ಅಲವತ್ತುಕೊಂಡಾಗ ''ಹಾಗಂದರುಂಟೇನಮ್ಮಾ ಕೂಗು ಮಾರೀಂತಂದ್ರೆ ಹುಡುಗಾಟವಾಗಿ ಹೋಯ್ತು. ಗುಂಡಪ್ಪ ಇನ್ನೂ ಹುಡುಗ ಅವನಿಗೇನು ತಿಳೀದತೆ ಹಿರಿಯೋರಾಗಿ ನೀವು ಅವನಿಗೆ ಹಾದಿ ತೋರಿಸ್ಬೇಕು ವೆಂಕಮ್ಮನವರೆ ಅವನು ಬ್ಯಾಡಾಂತಂದ್ರೆ ಬಿಡೋಕಾಗುತ್ಯೆ ಅದರ ಉಪದ್ರನ ತಡೆಕೊಳ್ಳೋಕೆ ನಮ್ಗೆ ಶಕ್ತಿಯಿದ್ಯೆ? ಮೊನ್ನೆ ಪ್ಯಾಟೆ ಬೀದೀಲಿ ಕೂಗುಮಾರಿ ಒಬ್ಬನ್ನ ಬಲಿ ತೆಗೊಂಡ್ತಲ್ಲಾ ಅದು ನಿಮಗೆ ಗೊತ್ತಿಲ್ವೆ?''

ಎಂದು ಕೃಷ್ಣಾಚಾರ್ಯರು ಯಾವುದೋ ಚಿದಂಬರ ರಹಸ್ಯವನ್ನು ಹೇಳುವಂತೆ

ಪಿಸುದನಿಯಲ್ಲಿ ನುಡಿದರು.

ನಾಗಜ್ಜಿ ಒಂದುಕಡೆ, ಕೃಷ್ಣಾಚಾರ್ಯರು ಮತ್ತೊಂದು ಕಡೆ ವೆಂಕಮ್ಮನ ಕಿವಿ ಊದುತ್ತಿದ್ದಾಗ, ಪೇಟೆಗೆ ಹೋಗಿದ್ದ ಗುಂಡಪ್ಪ ಮನೆಗೆ ಬಂದ. ವೆಂಕಮ್ಮ ಕೂಗುಮಾರಿಯ ಸುದ್ದಿಯನ್ನು ಸಂಕ್ಷಿಪ್ತವಾಗಿ ಹೇಳಿದಾಗ ಅವನು ಅವರ ಮೇಲೆ ಹಾರಾಡಿದ. "ನಿನಗೆ ಬುದ್ಧಿಯಿದೆಯಮ್ಮ ಕೂಗೂ ಇಲ್ಲ ಮಾರಿ ಮೊದಲೇ ಒಲ್ಲ. ಇದೆಲ್ಲಾ ಕೆಲಸಯಿಲ್ಲದ ಮಂದಿ ಹಬ್ಬಿಸಿರೋ ಸುಳ್ಳು ಸುದ್ದಿ. ನೀನೇನೂ ಗಾಭರಿ ಪಡಬೇಡ" ಎಂದು ವೆಂಕಮ್ಮನಿಗೆ ಹೇಳಲು ಪ್ರಯತ್ನಿಸಿದ.

"ನಿನ್ನ ತಲೆ ಕೃಷ್ಣಾಚಾರ್ಯರಿಗೇನು ತಲೆ ಕೆಟ್ಟಿದ್ಯೆ. ನಾಗಜ್ಜಿ ಏನು ಸುಳ್ಳು ಹೇಳ್ತಾರೆಯೆ. ಅವರೆಲ್ಲಾ ಹೇಳ್ತಿರೋವಾಗ ನಿಂದೇನು ಪ್ರತಿಷ್ಟೆ. ಬಾಗಿಲಮ್ಯಾಲೆ ನಾಲ್ಕು ಅಕ್ಷರ ಬರೆಯೋಕೆ ನಿನಗೇನು ಧಾಡಿಯಾಗಿದ್ಯೋ ಗುಂಡ" ಎಂದು ಮಗನ ಮೇಲೆ ಹರಿಹಾಯ್ದರು ವೆಂಕಮ್ಮ. "ಇದೆಲ್ಲಾ ಬರೀ ಬೊಗಳೆ ಸುಳ್ಳು ಸುದ್ದಿ, ಯಾರೂ ನಂಬಬೇಡೀಂತ ಪೋಲೀಸಿನೋರು, ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರಲ್ಲ, ನಿನಗೆ ಗೊತ್ತಿಲ್ಲೇನು?" ಎಂದು ಮರುಸವಾಲು ಹಾಕಿದ ಗುಂಡಪ್ಪ. ಸಂಪ್ರದಾಯಸ್ಥಳಾದ ವೆಂಕಮ್ಮನಿಗೆ ನಾಗಜ್ಜಿಯ ಮಾತಿಗಿಂತ ಪೋಲೀಸರ ಹೇಳಿಕೆ ಪಥ್ಯವಾಗುತ್ತದೆಯೆ. "ಸುಮ್ನೆ ಪೆದ್ದನ ಹಾಗೆ ಆಡ್ಬೇಡ. ಆಚಾರ್ಯರು ಹೇಳಿದ ಹಾಂಗೆ ಬಾಗಿಲ ಮ್ಯಾಲೆ ಬರಿ." ಎಂದು ಮಗನಿಗೆ ಅಪ್ಪಣೆಯಿತ್ತರು ವೆಂಕಮ್ಮ. ಅವರಿಗೆ ಕೃಷ್ಣಾಚಾರ್ಯರ ಮಾತೆಂದರೆ ವೇದವಾಕ್ಯ.

"ಗುಂಡಪ್ಪಾ, ಬಾಗಿಲ ಮ್ಯಾಗೆ ಎರಡು ಪಂಕ್ತಿ ಬರೆದು ಹಾಕಿದ್ರೆ ನಿನ್ನ ಗಂಟೇನು ಹೋಗುತ್ತೆ ಹೇಳು. ಮಾರಿ ಕೂಗಿದಾಗ ನಿನ್ನ ತಾಯಿ ಯಾವ್ದೋ ಅಜ್ಞಾನದಾಗೆ ಜವಾಬು ಕೊಟ್ರೆ, ಆಕಿ ಪರಿಸ್ಥಿತಿ ಏನಾಗುತ್ತೆ ಅಂಬೋ ಪರಿಜ್ಞಾನ ನಿನಗೆ ಇರಬೇಕಪ್ಪ. ಆಕಿ ಹಿತಾನೆ ನಿನಗೆ ಮುಖ್ಯ....." ಎಂದು ಆಚಾರ್ಯರು ಪುಟ್ಟ ಭಾಷಣವನ್ನೇ ಕೊರೆದಾಗ ಗುಂಡಪ್ಪನ ತಲೆ ಚಿಟಗುಟ್ಟಿತು. ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡಿ ಇತ್ತೀಚೆಗಷ್ಟೆ ಮನೆಗೆ ಸುಣ್ಣ ಬಣ್ಣ ಮಾಡಿಸಿದ್ದ ಗುಂಡಪ್ಪ. ಬಾಗಿಲಿಗೆ ವಾರ್ನಿಷ್ ಹಾಕಿ ಥಳಥಳಿಸುವಂತೆ ಪಾಲಿಷ್ ಮಾಡಿಸಿದ್ದ. ಅಂದವಾದ ಬಾಗಿಲಿನ ಮೇಲೆ ಅವಲಕ್ಷಣವಾಗಿ ನಾಮ ಇಟ್ಟು, ನಾಳೆಬಾ ಅಂತ ಕೂಗುಮಾರಿಗೆ ಕರೆಕೊಡುವುದು ಅವನಿಗೆ ಸುತರಾಂ ಸಹ್ಯವಾಗಲಿಲ್ಲ. "ಈಗತಾನೆ ಸುಣ್ಣ ಬಣ್ಣ ಮಾಡಿಸಿದೀನಿ ಬಾಗಿಲ ಮೇಲೆ ಹಾಗೆಲ್ಲಾ ಬರೆದು ಗಲೀಜು ಮಾಡಿದ್ರೆ ಚೆನ್ನಾಗಿರುತ್ತೆ ಆಚಾರ್ರೆ?" ಎಂದು ಅವನು ಅಸಹಾಯಕನಂತೆ ಕೇಳಿದ. "ನೀನು ಅಜ್ಞಾನಿ ಕಣೋ ಗುಂಡ, ಸೀಮೆಸುಣ್ಣದಾಗೆ ಬರದ್ರೆ, ಕೂಗುಮಾರಿ ಉಪದ್ರ ಮುಗಿದ ಮ್ಯಾಲೆ ಅದನ್ನ ಅಳಿಸಿ ಹಾಕೋಕೆ ಆಗೂಲ್ವೆ?" ಎಂದು ನಾಗಜ್ಜಿ ತಕ್ಷಣವೇ ತಮ್ಮ ಸಲಹೆಯನ್ನು ಕೊಟ್ಟರು.

ಕೃಷ್ಣಾಚಾರ್ಯರ ಪಾಂಡಿತ್ಯ, ನಾಗಜ್ಜಿಯ ಅನುಭವ ವೆಂಕಮ್ಮನ ವರಾತಕ್ಕೆ ಕಟ್ಟುಬಿದ್ದು ಗುಂಡಪ್ಪ ಒಂದು ಒಪ್ಪಂದಕ್ಕೆ ಬಂದ.

ಸೀಮೆಸುಣ್ಣದಲ್ಲಿ ಬರೆಯೋದು ಬ್ಯಾಡಿಸ್ವಾಮಿ. ಲಕ್ಷಣವಾಗಿ ಒಂದು ಬೋರ್ಡು ಬರದು ತಗುಲಿ ಹಾಕಿದರೆ ಪರ್ಮನೆಂಟಾಗಿರುತ್ತೆ. ಕೂಗುಮಾರಿ ಸೀಸನ್

ಶುರುವಾದಾಗ, ಬಾಗಿಲ ಮುಂದೆ ಬೋರ್ಡು ತಗುಲಿಹಾಕೋದು, ಸೀಸನ್ ಮುಗಿದ್ಮೇಲೆ ಬೋರ್ಡನ್ನು ತೆಗೆದು ಒಳಗಿಡೋದು ಇದಕ್ಕೇನಂತೀರಾ?'' ಎಂದು ಗುಂಡಪ್ಪ ಹೇಳಿದಾಗ ''ಭಲೋದಾತು ಹಾಂಗೆ ಮಾಡು'' ಎಂದು ಆಚಾರ್ಯರು ಅಪ್ಪಣೆ ಕೊಡಿಸಿದರು.

ಇಷ್ಟಾದ ಮೇಲೂ ಗುಂಡಪ್ಪನ ಮನಸ್ಸಿನಲ್ಲಿ ಸಂಶಯವೊಂದು ಸುಳಿಯಿತು. ''ಕೂಗುಮಾರಿಗೆ ಅರ್ಥವಾಗುವ ಭಾಷೆಯಾವುದು? ಕೇವಲ ಕನ್ನಡ ಭಾಷೆಯೊಂದರಲ್ಲೇ ಬರದರೆ ಅದಕ್ಕೆ ಅರ್ಥವಾಗುತ್ತದೆಯೆ? ಛಪ್ಪನ್ನಾರು ಪ್ರದೇಶಿರುವಂತೆ ಛಪ್ಪನ್ನಾರು ಭಾಷೆಗಳಲ್ಲೂ ಬೋರ್ಡನ್ನು ಬರಸಿದರೆ, ಮೂರುx ಆರು ಅಗಲದ ಬಾಗಿಲಿಗೆ ಎಲ್ಲಾ ಬೋರ್ಡುಗಳನ್ನು ತಗುಲಿ ಹಾಕುವುದು ಹೇಗೆ?'' ಎಂಬ ಚಿಂತೆ ಅವನನ್ನು ಕಾಡಿತು. ತನ್ನ ಅನುಮಾನವನ್ನು ಅವನು ಅವರ ಮುಂದಿಟ್ಟ. ಸಂಸಾರ ಸಾಗರದಲ್ಲಿ ಎಷ್ಟೋ ಸಮಸ್ಯೆಗಳನ್ನೆದುರಿಸಿ, ನಿಭಾಯಿಸಿದ್ದ ಬಾಲ ವಿಧವೆ ನಾಗಜ್ಜಿಗೆ ಇದೊಮದು ದೊಡ್ಡ ಸಮಸ್ಯೆಯೇ? ಇದು ದಡ್ಡ ಪ್ರಶ್ನೆಯೆಂದೇ ಆಕೆಗೆ ತೋರಿತು.

''ಅಯ್ಯೋ ತಿಳಿಗೇಡಿ. ಅಷ್ಟೂ ಗೊತ್ತಾಗುಲ್ವೇನೋ ಗುಂಡ. ಕೂಗುಮಾರಿ ಬಂದಿರೋದು ಬೆಂಗಳೂರಿಗೆ. ಹಾಗಿದ್ಮೇಲೆ ಅದು ಕನ್ನಡದಲ್ಲಿ ತಾನೆ ಕೂಗಬೇಕು. ಕನ್ನಡ ತಾನೆ ಓದಬೇಕು ಪರಂಗಿ ಭಾಷೇನಾಗೆ ಕುಗೋಕೆ ಆಗುತ್ತೇನೋ ದಡ್ಡ, ಶಥ ದಡ್ಡ ದಿವಿನಾಗಿ ಕನ್ನಡದಲ್ಲಿ ಬೋರ್ಡು ಬರಸಿ ಹಾಕು'' ಎಂದು ತೀರ್ಮಾನವಾಗಿ ಹೇಳಿದರು ನಾಗಜ್ಜಿ.

ನಾಗಜ್ಜಿಯ ಮಾತು ಕೇಳಿ ಗುಂಡಪ್ಪ ಬಲು ಖಷಿಪಟ್ಟ, ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರನ್ನು ಪತ್ತೆಹಚ್ಚುವುದೇ ಕಷ್ಟವಾಗಿರುವಾಗ, ಕನ್ನಡದಲ್ಲೇ ಕೂಗಿ, ಕನ್ನಡವನ್ನೇ ಓದುವ ಕೂಗುಮಾರಿಯ ಕನ್ನಡಾಭಿಮಾನವನ್ನು ಅವನು ಮನದಲ್ಲೇ ಮೆಚ್ಚಿಕೊಂಡ. ''ಆದಷ್ಟು ಬ್ಯಾಗ ಬೋರ್ಡು ಬರಸಿ ಹಾಕು ಗುಂಡಪ್ಪ. ಅಡಿ ಧಾನಸ ಮಾಡಿದ್ರೆ ಅನಾಹುತವಾದೀತು'' ಎಂದು ಎಚ್ಚರಿಸಿ, ವೆಂಕಮ್ಮ ಕೊಟ್ಟ ಕಾಫಿಕಷಾಯವನ್ನು ಗುಟಕರಿಸಿ, ಕೃಷ್ಣಾಚಾರ್ಯರು ಹೊರನಡೆದರು. ''ಭದ್ರಕಣೆ ವೆಂಕು, ಗುಂಡಪ್ಪ ಬೋರ್ಡು ಹಾಕೋವರ್ಗೂ ನೀನು ಯಾರು ಕೂಗಿದ್ರೂ ಜವಾಬು ಕೊಡಬ್ಯಾಡ'' ಎಂದು ಸಲಹೆಯಿತ್ತು ನಾಗಜ್ಜಿಯೂ ನಿಷ್ಕ್ರಮಿಸಿದರು. ಗುಂಡಪ್ಪನೂ ಬೋರ್ಡು ಬರೆಯುವವರನ್ನು ಹುಡುಕಲು ಹೊರಟ.

ಸಲೀಸಾಗಿ ಯಾವ ಕೆಲಸವೂ ಆಗದ ಈ ಕಾಲದಲ್ಲಿ ಬೋರ್ಡು ಬರೆಯುವವರು ಅಷ್ಟು ಬೇಗ ಕಣ್ಣಿಗೆ ಬೀಳುತ್ತಾರೆಯೆ, ಅಲ್ಲಲ್ಲಿ ವಿಚಾರಿಸಿದ. ''ಮಾರಿ ಮುತ್ತೂಂತ ಇದಾನೆ ಮುದ್ದಾಗಿ ಬರೀತಾನೆ. ಹೋಗಿ ವಿಚಾರಿಸಿ'' ಎಂದರು ಕೆಲವರು. ''ಮಾಸಿಲಾಮಣಿ ಸೈನ್ ಬೋರ್ಡ್ ಬರೆಯೋದ್ರಲ್ಲಿ ಎತ್ತಿದಕೈ ಅವನ ಹತ್ತಿರ ಬರಸಿ'' ಎಂದು ಮತ್ತೆ ಕೆಲವರು ಸಲಹೆ ಕೊಟ್ಟರು. ಎಲ್ಲಾ ತಮಿಳು ಹೆಸರುಗಳೆ ಕನ್ನಡದಲ್ಲಿ ಬೋರ್ಡು ಬರೆಯುವ ಕನ್ನಡಿಗರ್ಯಾರೂ ಗುಂಡಪ್ಪನಿಗೆ ಪತ್ತೆಯಾಗಲಿಲ್ಲ ''ಮುರುಗವೇಲು ಹತ್ತಿರ ಬರಸಿಸ್ವಾಮಿ ಅವನಾದರೆ ಭರ್ಜರಿಯಾಗಿ ನಾಮ ಇಟ್ಟು ಬರ್ಕೊಡ್ತಾನೆ ಹ್ಯಾಗೆ ನಾಮ ಇಡಬೇಕೂಂತ ಅವನಿಗೆ ಚೆನ್ನಾಗಿ ಗೊತ್ತು'' ಎಂದು ಕೊಳಚೆ ಪ್ರದೇಶದಲ್ಲಿದ್ದ ಮುರುಗ ವೇಲುವಿನ

ಮನೆಯನ್ನು ಯಾರೋ ಗುಂಡಪ್ಪನಿಗೆ ತೋರಿಸಿದರು.

ನೂರಾರು ಬ್ರಷ್ಷು ಬಣ್ಣಗಳನ್ನು ಹರಡಿಕೊಂಡು ಹಲವಾರು ಬೋರ್ಡುಗಳ ಮಧ್ಯ ಕೂತಿದ್ದ ವೇಲು ಬಲು ಬಿಜಿಯಾಗಿರುವಂತೆ ಕಂಡುಬಂತು. ಗುಂಡಪ್ಪ ಬೋರ್ಡಿನ ಬಗ್ಗೆ ಅವನಿಗೆ ಹೇಳಿದಾಗ ''ಮುನ್ನೂರು ರೂಪಾಯಿ ಆಗ್ತದೆಸ್ವಾಮಿ'' ಎಂದು ವೇಲು ರೇಟಿನ ಬಗೆ ಖಡಾಖಂಡಿತವಾಗಿ ಹೇಳಿದ. ''ಬಹಳ ದುಬಾರಿಯಾಯ್ತು'' ಎಂದು ಗುಂಡಪ್ಪ ಗೊಣಗುಟ್ಟಿದಾಗ, ವೇಲು, ಬಣ್ಣ ಬ್ರಷ್‌ಗಳ ಬೆಲೆ ಗಗನಕ್ಕೆ ಏರಿರುವುದನ್ನು ವಿವರಿಸಿ, ''ನೋಡಿ ಸ್ವಾಮಿ ನಾಮ ಬ್ಯಾಡಾಂದ್ರೆ ಬರೀ ಲೆಟರ್ಸ್ನ ನೂರು ರೂಪಾಯ್ಗೆ ಬರ್ಕೊಡ್ತೀನಿ. ನಮ್ತಾವು ಚೌಕಾಸಿ ಯಾಪಾರ ಇಲ್ಲ ಸ್ವಾಮಿ'' ಎಂದು ಕಡೇ ಮಾತು ಹೇಳಿದ. ನಾಮ ಇಲ್ಲದ ಬೋರ್ಡನ್ನು ತನ್ನ ತಾಯಿ ಸುತರಾಂ ಒಪ್ಪುವುದಿಲ್ಲವೆಂದು ತಿಳಿದಿದ್ದ ಗುಂಡಪ್ಪ, ನಾಮವಿರುವ ಬೋರ್ಡನ್ನೇ ಬರೆಯುವಂತೆ ವೇಲುವಿಗೆ ಆರ್ಡರ್ ಕೊಟ್ಟು ನೂರು ರೂಪಾಯಿ ಮುಂಗಡವನ್ನು ತೆತ್ತು ಮನೆಗೆ ಬಂದಿದ್ದ ಮಾರನೆಯ ದಿನ ಬೋರ್ಡು ತಯಾರಾಗಿರುತ್ತದೆಂದು ಪೂರ್ತಿ ಹಣವನ್ನು ಕೊಟ್ಟು ತೆಗೆದುಕೊಂಡು ಹೋಗಬಹುದೆಂದು, ಗುಂಡಪ್ಪನಿಗೆ ವೇಲು ಭರವಸೆಯನ್ನು ಕೊಟ್ಟಿದ್ದ.

ಆದರೆ ಗುಂಡಪ್ಪ ಮಾರನೇ ದಿನ ವೇಲುವಿನ ಕೊಂಪೆಗೆ ಹೋದಾಗ ಬೋರ್ಡು ತಯಾರಾಗಿರಲಿಲ್ಲ. ತುಂಡು ಬೀಡಿಯನ್ನು ಸೇದುತ್ತಿದ್ದ ವೇಲು ಹಲ್ಲುಕಿರಿಯುತ್ತಾ ''ಇನ್ನೂ ರೆಡಿ ಆಗಿಲ್ಲ ಸಾರ್. ನಾಳೆ ವಾಂಗೋ'' ಎಂದು ನಿಸೂರಾಗಿ ಹೇಳಿದ. ''ಮಾರನೆಯ ದಿನವು ಬೋರ್ಡು ರೆಡಿಯಾಗಿರಲಿಲ್ಲ. ಟಿನ್ ಫ್ರೇಮಿಂಗೆ ಕೊಟ್ಟಿವ್ನಿ ಸಾರ್. ನಾಳೇಕೆ ರೆಡಿ ಆಯ್ತದೆ ಬರ್‍ರಿ'' ಎಂದು ಗುಂಡಪ್ಪನನ್ನು ಸಾಗುಹಾಕಿದ. ಮುರುಗವೇಲುವಿನ ಸ್ಟುಡಿಯೋಗೆ ಐದಾರು ದಿವಸ ಎಡತಾಕಿದರೂ ''ನಾಳೆ ವಾಂಗೋ'' ಎನ್ನುವ ಜವಾಬೇ ಕಾದಿರುತ್ತಿತ್ತು. ಕೂಗುಮಾರಿಗೆ ''ನಾಳೆಬಾ'' ಎಂದು ಗುಂಡಪ್ಪ ಹೇಳಬೇಕಾಗಿದ್ದುದನ್ನು ಮುರುಗವೇಲು ಗುಂಡಪ್ಪನಿಗೆ ಹೇಳಿಕಳಿಸುತ್ತಿದ್ದ.

ನಾಗಜ್ಜಿ, ಕೃಷ್ಣಾಚಾರ್ಯರು, ವೆಂಕಮ್ಮ ಮೂವರೂ ಕೂಡಿ ಗುಂಡಪ್ಪನನ್ನು ತರಾಟೆಗೆ ತೆಗೆದುಕೊಂಡಿದ್ದರು. ಬೋರ್ಡಿನ ಪ್ರಕರಣದಿಂದ ಅವನಿಗೂ ತಲೆ ಕೆಟ್ಟುಹೋಗಿತ್ತು. ಎಂಟನೇದಿನ ಗುಂಡಪ್ಪ ಬಂದಾಗ ವೇಲು ಕಾಗದದಿಂದ ಪ್ಯಾಕ್ ಮಾಡಿದ ಬೋರ್ಡನ್ನು ಅವನಿಗೆ ಕೊಟ್ಟ ಗುಂಡಪ್ಪ ಅದನ್ನು ಹೊತ್ತುಕೊಂಡು ಮನೆಗೆ ಓಡಿಯೇ ಬಂದ. ನಾಗಜ್ಜಿ, ಕೃಷ್ಣಾಚಾರ್ಯರು ಮಾಮೂಲಿನಂತೆ ವೆಂಕಮ್ಮನೊಡನೆ ಹರಟೆ ಹೊಡೆಯುತ್ತಿದ್ದರು. ''ಹ್ಯಾಗಿದೆ ನೋಡಿ ಆಚಾರ್ರೆ'' ಎಂದು ಕಾಗದವನ್ನು ಹರಿದು ಬೋರ್ಡನ್ನು ನೋಡಿದಾಗ ಗುಂಡಪ್ಪನಿಗೆ ಮೂರ್ಛೆ ಬಂದತಾಯ್ತು. ''ನಳಬಾ'' ಎಂದು ಲಕ್ಷಣವಾಗಿ ಮೂರು ನಾಮದ ಕೆಳಗೆ ಮುರುವೇಲು ಮುದ್ದಾಗಿ ಬರೆದಿದ್ದ ''ಇದೇನು ಹೀಗೆ ಕನ್ನಡವನ್ನು ಬರದಿದ್ದಾನಲ್ಲ ಅಯೋಗ್ಯ'' ಎಂದು ಗುಂಡಪ್ಪ ಅಲವತ್ತುಕೊಂಡಾಗ ''ಬೋರ್ಡು ಹ್ಯಾಂಗಿದ್ರೆ ಈಗ ಏನಾತಪ. ನೀನು ತಂದದ್ದು ಬಲು ಲೇಟಾತು ನೋಡು ಮೊನ್ನಿಯಿಂದ್ಲೆ ಕೂಗುಮಾರಿ ಬೆಂಗಳೂರು ಬಿಟ್ಟ ಹೊರಟು ಹೋದ್ಲೂಂತ ನಮಗೆ ಸುದ್ದಿ ಬಂದದೆ. ಇನ್ಯಾಕೆ ಅದರ ಚಿಂತಿ ಬಿಡು'' ಎಂದು ಕೃಷ್ಣಾಚಾರ್ಯರು ಹೇಳಿದರು. ''ಕೂಗು ಮಾರಿಯ ಸೀಜನ್ ಇಷ್ಟು ಬೇಗ ಮುಗಿದು ಹೋಯಯಿತಲ್ಲಾ'' ಎಂದು ಗುಂಡಪ್ಪ ಗೋಳಾಡಿದ.

50 ರೂಪಾಯಿ ನೋಟು - ನಂಬ್ರ 2UV 058580

-ಯು. ಎಸ್. ರಾವ್

ಐವತ್ತು ರೂಪಾಯಿ ನೋಟು ಒಂದು ಎಲ್ಲಿಂದ ಬಂದಿತೆಂದು ನಾನು ಗಮನಿಸಿರಲಿಲ್ಲ. ಏನು ಮಹಾ! ಐವತ್ತು ರೂಪಾಯಿ ಈಗ ಒಂದು ಸಲ ಮಾರ್ಕೆಟಿಗೆ ಹೋಗಿ ಬರಲು ಕೂಡ ಸಾಲುವುದಿಲ್ಲವಲ್ಲ.

ಮೊದಲು ಅದನ್ನು ನಾನು ಕಿಸೆಯಿಂದ ತೆಗೆದುಕೊಟ್ಟದು ನಮ್ಮ ಡಾಕ್ಟರಿಗೆ. ಏನೋ ಕಣ್ಣು ಉರಿತ, ತುರಿಸುವಿಕೆ ಎಂದು ಅವರಿಗೆ ತೋರಿಸಿ, ಎರಡು ದಿನದ ಮದ್ದು ಪಡೆದು ಈ ಐವತ್ತರ ನೋಟನ್ನು ಕೊಟ್ಟೆ. ಅವರು ಎರಡು ದಿನದ ಮದ್ದಿಗೆ ಯಾವಾಗಲೂ ಹದಿನೈದು ರೂಪಾಯಿ ಪಡೆದುಕೊಳ್ಳುತ್ತಾರೆ. ಆದರೆ ಆ ದಿನ ಚಿಲ್ಲರೆ ಇರಲಿಲ್ಲವೋ ಏನೋ "ನಾಡಿದ್ದು ಹೇಗೂ ಬರುತ್ತೀರಲ್ಲ; ಆಗಲೇ ಕೊಟ್ಟರಾಯಿತು" ಎಂದು ನೋಟನ್ನು ವಾಪಸು ಮಾಡಿದರು. ಹಿಂದೆ ಇದುವರೆಗೆ ಅವರು ಹೀಗೆ ಮಾಡಿದುದಿಲ್ಲ. ಆದರೆ ಹದಿನೈದು ರೂಪಾಯಿ ಅವರಿಗೆ ಏನು ಲೆಕ್ಕ? ನನಗೆ ಮಾತ್ರ ಡಾಕ್ಟರ ಬಾಕಿ ಇಟ್ಟುಕೊಳ್ಳುವುದೆಂದರೆ ಕಿರಿಕಿರಿ ತಿರುಗಿ ಅವರ ಬಳಿ ಬರಬೇಕಾಗುವುದು ಯಾರಿಗೆ ಬೇಕು?

ಮರುದಿನ ಚಿಲ್ಲರೆ ಸಾಮಾನುಗಳ ಪಟ್ಟಿ ಹಿಡಿದುಕೊಂಡು ಜೀನಸಿನ ಅಂಗಡಿಗೆ ಹೋದೆ. ಮೂರು ನಾಲ್ಕು ಐಟೆಮ್‌ಗಳಿಗೇ ಮೂವತ್ತೈದು ಚಿಲ್ಲರೆ ಬಿಲ್ ಕೊಟ್ಟರು. ಕಿಸೆಯಲ್ಲಿ ಉಳಿದಿದ್ದ ಅದೇ ಐವತ್ತರ ನೋಟು ತೆಗೆದು ಕೊಟ್ಟರೆ, ಅವನು ಏನೋ ಆಲೋಚಿಸಿ, "ನಾಳೆ ನಾಡದು ನೀವು ಈ ಕಡೆಗೆ ಬಂದಾಗ ಕೊಡಿ, ಸಣ್ಣ ಮೊತ್ತ ತಾನೇ" ಎಂದ. ಆಗಾಗ ಆಗುತ್ತಿರುವಂತೆ ಚಿಲ್ಲರೆ ನೋಟು, ನಾಣ್ಯಗಳಿಗೆ ಬರಗಾಲ ಬಂದಿರಬೇಕು ಎಂದು ಎಣಿಸುತ್ತ ನೋಟನ್ನು ಕಿಸೆಗೆ ಹಾಕಿದೆ. ಮನೆಯ ದಾರಿಯಲ್ಲಿ ನೆನಪಾಯಿತು. ಈ ಅಂಗಡಿಯವನು ಮಹಾ ಲೆಕ್ಕಾಚಾರದ ಮನುಷ್ಯ. ಅವನ ಬಾಕಿ ಇಟ್ಟುಕೊಳ್ಳುವುದು ಒಳ್ಳೆಯದಲ್ಲ. ಮನೆಗೆ ಬಂದ ಕೂಡಲೆ ಡೈರಿಯಲ್ಲಿ ಮರುದಿನ ಹಣಪಾವತಿ ಮಾಡಲು ಬರೆದಿಟ್ಟುಕೊಂಡೆ.

ಐವತ್ತು ರೂಪಾಯಿ ನನ್ನ ಬಳಿ ಹೀಗೆ ಉಳಿದುದು ಬಹಳ ಅಪರೂಪ. ಯಾವಾಗಲೂ ಉಳಿಯುವುದು ಚಿಂದಿಯಾದ ಒಂದು, ಎರಡರ ಕೊಳೆ ನೋಟುಗಳು.

ಮರುದಿನ ಆ ನೋಟನ್ನು ಇವಳಿಗೆ ಮಾರ್ಕೆಟಿಗೆ ಹೋಗುವಾಗ ಕೊಡಬೇಕಾಯಿತು. ಮದುವೆಯಾಗಿ ಮೂವತ್ತು ವರ್ಷಗಳೇ ಕಳೆದಿವೆ ಇವಳು ಕೊಟ್ಟ ಹಣ ಸಾಕು ಎಂದುದೂ ಇಲ್ಲ ಅಥವಾ ಚಿಲ್ಲರೆ ವಾಪಸು ಕೊಟ್ಟುದಿಲ್ಲ. ಆದರೆ ಈ ಸಲ ಖರೀದಿ ಮುಗಿಸಿ ಬಂದು ಆ ನೋಟನ್ನು ವಾಪಸ್ಸು ಮಾಡುತ್ತ ಹೇಳಿದಳು ''ನನ್ನ ಹತ್ತಿರ ಒಂದೆ ಉಳಿದಿದ್ದ ಹಣದಿಂದಲೇ ಮುಗಿಸಿದೆ. ಇದನ್ನು ನೀವು ಇಟ್ಟುಕೊಳ್ಳಿ. ಬೇರೆ ಯಾವುದಕ್ಕಾದರೂ ಬೇಕಾದೀತು.''

ಈಗ ನನಗೆ ಆ ನೋಟಿನ ಮೇಲೆಯೇ ಸಂಶಯ ಬಂದಿತು. ಬೆಳಕಿಗೆ ಹಿಡಿದು ಸೂಕ್ಷ್ಮವಾಗಿ ಪರೀಕ್ಷಿಸಿದೆ. ವಾಟರ್ ಮಾರ್ಕ್, ನಡುವಿನ ಲ್ಯಾನ್ ಇತ್ಯಾದಿ ಸರಿಯಾಗಿಯೇ ಇತ್ತು. ನೋಟು ಪರೀಕ್ಷೆ, ಬ್ಯಾಂಕಿಗೆ ಮೂವತ್ತೈದು ವರ್ಷ ಕಲ್ಲು ಹೊತ್ತ ನನಗೆ ತಿಳಿಯದೆ ಇರುತ್ತದೆಯೇ?

ಮರುದಿನದಿಂದ ಬೇಕೆಂದೇ ಆ ನೋಟನ್ನು ತರಕಾರಿ ಮಾಡುವವನೊಡನೆ, ಇಸ್ತ್ರಿ ಅಂಗಡಿಯಲ್ಲಿ, ಹೋಟೆಲಿನಲ್ಲಿ ಕೊಟ್ಟು ನೋಡಿದೆ ಪ್ರತಿ ಸಲ ಯಾವುದೋ ಕಾರಣದಿಂದ ನೋಟು ವಾಪಸಾಗುತ್ತಿತ್ತು. ಮಾರ್ಕ್ ಟ್ವೈನ್‌ನ ಮಿಲಿಯನ್ ಡಾಲರ್ ನೋಟಿನ ಕಥೆ ಜ್ಞಾನಪಕಕ್ಕೆ ಬಂದಿತು. ಆದರೆ ಇದು ಜುಜುಬಿ ಐವತ್ತು ರೂಪಾಯಿಯ ನೋಟು.

ಐದಾರು ದಿನಗಳಲ್ಲಿ ಹೊಳೆಯಿತು ಈ ನೋಟಿಗೆ ಯಾರೋ ಮಂತ್ರ, ಮಾಟ ಮಾಡಿರಬೇಕು. ಇದು ನನ್ನ ಕೈ ಬಿಟ್ಟು ಹೋಗಲಾರದು. ಹೋಗಬೇಕಾದರೆ, ಮಾಡಿದ ಮಂತ್ರದ ಮಹಿಮೆ ಸವೆಯಬೇಕೋ ಏನೋ!

ಅದನ್ನು ಪ್ಲಾಸ್ಟಿಕ್ ಕವರಿನಲ್ಲಿ ಹಾಗೇ ಇಟ್ಟಿದ್ದೇನೆ. ಆದರೆ ನನಗೆ ಒಂದು ಸಂಶಯ. ಮಂತ್ರದ ನೋಟು ಇನ್ನೊಬ್ಬರ ಕೈಗೆ ಹೋದರೂ ಹೀಗೆಯೇ ಉಳಿಯುತ್ತದೆಯೇ? ಇದನ್ನು ಪರೀಕ್ಷಿಸಬೇಕಾದರೆ ನಾನು ನೋಟನ್ನು ಕೈ ಎತ್ತಿ ಇನ್ನೊಬ್ಬರಿಗೆ ಕೊಡಬೇಕು. ನಾನೇನೋ ಸಿದ್ಧ. ತೆಗೆದುಕೊಳ್ಳುವವರು ಬೇಕು. ಅವರು ಪರೀಕ್ಷೆ ನಡೆಸಿ ನನಗೆ ಐವತ್ತು ರೂಪಾಯಿ ಮರಳಿಸಬೇಕಾಗಿಲ್ಲ. ನೀವು ಯಾರಾದರೂ ಸಿದ್ಧರಾಗಿದ್ದರೆ ಬರೆಯಿರಿ ವಿಜ್ಞಾನಕ್ಕೆ ಒಂದು ಕೊಡುಗೆಯಾದರೂ ಆಗಲಿ!

(ಸಂಪಾದಕರಿಗೆ: ಓದುಗರಲ್ಲಿ ಯಾರಾದರೂ ಈ ನೋಟನ್ನು ಚಲಾಯಿಸುವ ಸಾಹಸಕ್ಕೆ ಇಳಿಯದೆ ಹೋದರೆ, ''ಅಪರಂಜಿ''ಯ ಚಂದಾಹಣಕ್ಕಾಗಿ ನೋಟನ್ನು ನಿಮಗೇ ಕಳಿಸಿಕೊಡುತ್ತೇನೆ.)

ವಿದೇಶಿ ರೊಬೊ ಮತ್ತು ದೇಶೀ ಕಾಗೆ

-ನಾಚಿ

ಚಂದ್ರು ಮೂರುತಿಂಗಳ ಅಮೆರಿಕ ಪ್ರವಾಸ ಮುಗಿಸಿಕೊಂಡು ಮೈಸೂರಿಗೆ ವಾಪಸ್ಸಾದದ್ದು ಬುಧವಾರ. ಗುರುವಾರ ಬೆಳಿಗ್ಗೆಯೇ ನಮ್ಮ ಗ್ಯಾಂಗ್‌ನವರೆಲ್ಲರನ್ನೂ ನಮ್ಮ ಕ್ಲಬ್‌ನಲ್ಲಿ ಸೇರಲು ಹೇಳಿದ್ದ. ನಮ್ಮ ಕ್ಲಬ್ ಅಂದರೆ ಇನ್ಯಾವುದೂ ಅಲ್ಲ-ಹಳೇ ಅಗ್ರಹಾರದ ರಾಜು ಅಯ್ಯರ್ ಹೋಟಲು. ಈಗ ಸುಮಾರು ನಲವತ್ತು ಐವತ್ತು ವರ್ಷಗಳಿಂದಲೂ ರಾಜು ಅಯ್ಯರ್ ಹೋಟಲು ಅದೇ ಹಳೇ ಮನೆಯಲ್ಲೇ ಇದೆ. ಅದೇ ಬೆಂಚು, ಅದೇ ಮೇಜು ಆದರೂ ಪರಮಾಯಿಷಿ ಸೆಟ್‌ದೋಸೆಯಿಂದ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿದೆ.

ಗುರುವಾರ ಬೆಳಿಗ್ಗೆನಾನು ರಾಜು ಅಯ್ಯರ್ ಹೋಟೆಲಿಗೆ ಹೋದಾಗ ಸರಿಯಾಗಿ ಎಂಟುಗಂಟೆ. ಹಾಲಿನೊಳಕ್ಕೆ ಹೊಗಿ ಎರಡು ನಿಮಿಷ ಅಲ್ಲೇ ನಿಂತೆ. ಆ ಅರ್ಧಕತ್ತಲು ಬೆಳಕಿಗೆ ಕಣ್ಣು ಹೊಂದಿಕೊಂಡಮೇಲೆ ಎಲ್ಲರೂ ಕಾಣಿಸಿದರು. ಮೂಲೆ ಸೀಟಿನಲ್ಲಿ ಮಲ್ಲಾರಿ ಕೂತಿದ್ದ. ಅವನ ಈ ಕಡೆ ಚಂದ್ರು, ಆಕಡೆ ಸಿದ್ದೇಶಿ, ಶೇಷಾದ್ರಿ ಕೂತಿದ್ದರು. ನಾನು ಸೇರಿಕೊಂಡೆ. ಖಾಯಂ ಗಿರಾಕಿಗಳೆಲ್ಲ ಕೂತಿದ್ದರು. ಕೆಲವು ರಸಿಕಾಗ್ರಹಿಗಳು ಎಡಗೈಯಲ್ಲಿ ಎರಡು ರೂಪಾಯಿನ ಬೆಣ್ಣೆಯನ್ನು ದೊನ್ನೆಯಲ್ಲಿಟ್ಟುಕೊಂಡು ಕಾಯುತ್ತಿದ್ದರು. ಶ್ರದ್ಧಾಭಕ್ತಿಯಿಂದ ಎಲ್ಲರೂ ಸೆಟ್‌ದೋಸೆಯ ಆಗಮನವನ್ನೇ ಎದುರು ನೋಡುತ್ತಿದ್ದರು.

ಸೆಟ್‌ದೋಸೆ ಬಂತು. ಒಂದು ಸೆಟ್ ಇಳಿಸಿ ಕಾಫಿ ಗುಟುಕರಿಸಿದ ಮೇಲೆ ಎಲ್ಲರ ಮುಖದಲ್ಲೂ ದುಗುಡ ಮಾಯವಾಗಿ, ಒಂದು ಧನ್ಯತೆಯ ಭಾವ ಮೂಡಿ ಬಂದು ಮುಖ ಪ್ರಸನ್ನವಾಯಿತು. ಮಾತು ಷುರುವಾಯ್ತು.

''ಈಗ ಹೇಳು ನಿನ್ನ ಅಮೆರಿಕ ಪ್ರವಾಸದ ಕಥೇನ'' ಅಂದ ಮಲ್ಲಾರಿ. ಚಂದ್ರು ಪ್ರಾರಂಭಿಸಿದ ''ನಯಾಗರ, ಡಿಸ್ನಿಲ್ಯಾಂಡ್ ಎಲ್ಲಾ ನೋಡಿದೆ. ನಿಮಗೆ ಅದೆಲ್ಲಾ ಗೊತ್ತೇ ಇದೆ. ಆದರೆ ನನಗೆ ತುಂಬಾ ಇಂಪ್ರೆಸ್ ಆದದ್ದು ಅಂದರೆ ರೊಬೊ. ಈಗ ಕೆಲವು ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ನಲ್ಲಿ ಸೇಲ್ಸ್‌ಮನ್ ಆಗಲಿ ಸೇಲ್ಸ್ ಗರ್ಲ್ ಆಗಲಿ ಇರೊಲ್ಲ ರೊಬೊನೇ ಎಲ್ಲಾ ಮಾಡತ್ತೆ'' ಅಂದ.

''ರೊಬೊ ಅಂದ್ರೇನು?'' ಅಂದ ಸಿದ್ದೇಶಿ.

''ರೊಬೊ ಅಂದರೆ ನಮ್ಮ ಸೈಜಿಂದೇ ಬೊಂಬೆ ಕಣೊ. ಅದರೊಳಗೆ ಕಂಪ್ಯೂಟರ್ ಇಟ್ಟಿರ್ತಾರೆ. ರೊಬೊ ಮಾತಾಡತ್ತೆ, ನಿನ್ನ ಹೆಸರೇನು ಅಂತ ಕೇಳತ್ತೆ, ನಿನಗೆ ಯಾವ ಸಾಮಾನು ಬೇಕು ಅಂತ ಕೇಳತ್ತೆ. ಇಂಥಾದ್ದು ಬೇಕು ಅಂತ ನೀನು ಹೇಳಿದರೆ ಅದನ್ನ ಹುಡುಕಿ ತಂದು ನಿನಗೆ ಕೊಡತ್ತೆ'' ಅಂದ ಚಂದ್ರು.

ನಾವೆಲ್ಲಾ ಬೆಪ್ಪಾದೆವು. ''ಅಮೆರಿಕನ್ನರ ತಲೇನೆ ತಲೆ ಕಣೋ! ಏನಂತಿ ಮಲ್ಲಾರಿ'' ಅಂದೆ.

''ಇದೇನು ಮಹಾ! ಬಿಡೋ ನಮ್ಮ ದೇಶದಲ್ಲೇ ಇದರಪ್ಪನಂಥಾದ್ದು ಇದೆ'' ಅಂದ ಮಲ್ಲಾರಿ.

''ಏನು? ನಮ್ಮ ದೇಶದಲ್ಲೂ ರೊಬೊ ಇದೆಯಾ?'' ಅಂತ ಕೇಳಿದ ಸಿದ್ದೇಶಿ.

''ರೋಬೊ ಇಲ್ಲ, ಆದರೆ ಅದರಪ್ಪನಂಥಾದ್ದು ಇದೆ ಅಂದೆ. ನಾನೇ ನೋಡಿದೀನಿ. ಎಲ್ಲೀಂತ ಹೇಳ್ತೀನಿ ಕೇಳಿ'' ಅಂತ ಷುರು ಮಾಡಿದ ಮಲ್ಲಾರಿ.

ಹೋದ ತಿಂಗಳು ಮದ್ರಾಸಿಗೆ ಹೋಗಬೇಕಾಗಿ ಬಂತು. ಬೆಂಗಳೂರಿಂದ ಬೆಳಗ್ಗೆ ರೈಲು ಹಿಡಿದೆ. ಗಾಡಿ ಒಳಗೆ ಹೋದಾಗ ನನ್ನ ಹಳೇ ದೋಸ್ತು ಕಂಠೀನೇ ಸಿಕ್ಕಿ ಆನಂದವಾಯ್ತು. ಮಾತಾಡ್ತಾ, ಕಾಲ ಕಳೆದದ್ದೇ ಗೊತ್ತಾಗಲಿಲ್ಲ. ವಾನಿಯಂಬಾಡಿ ಬಂತು. ಎಷ್ಟು ಹೊತ್ತಾದರೂ ರೈಲು ಅಲ್ಲೇ ನಿಂತಿತ್ತು. ಯಾಕೆ ಅಂತ ವಿಚಾರಿಸಿದಾಗ ಟ್ರಾಕ್‌ನಲ್ಲಿ ಏನೊ ತೊಂದರೆ ಇದೆ, ಇನ್ನೂ ಒಂದು ಗಂಟೆಯಾಗುತ್ತೆ ಸರಿ ಮಾಡೂಕೆ ಅಂತ ತಿಳಿಯಿತು.

ಇಲ್ಲೇನು ಕೂತಿರೋದು ಬಾರೊ, ವೇಲು ಅಂಗಡೀಲಿ ವಡೆ ತಿಂದುಕೊಂಡು ಬರೋಣ ಅಂತ ಕಂಠಿ ನನ್ನನ್ನು ಹೊರಗಡೆ ಕರೆದುಕೊಂಡು ಹೋದ. ಸ್ಟೇಷನ್ನಿನ ಸ್ವಲ್ಪ ದೂರದಲ್ಲೇ, ರಸ್ತೆ ಪಕ್ಕದಲ್ಲಿತ್ತು ಒಂದು ಸಣ್ಣ ಗುಡಿಸಲು. ಹೊರಗಡೆ ಒಂದು ಬೆಂಚು, ಇಲ್ಲಿ ವಡೆ ತುಂಬಾ ಚೆನ್ನಾಗಿರುತ್ತೆ ತೊಗೊ ಅಂದ ಕಂಠಿ. ಬಿಸಿ, ಬಿಸಿಯಾಗಿ ವಡೆ ಕರೀತಿದ್ದ ವೇಲು, ಮಧ್ಯೆ ಮಧ್ಯೆ ಮುರುಗಾ ಅಂತ ದೇವರ ಸ್ಮರಣೆ ಮಾಡುತ್ತಿದ್ದ. ಐದು ರೂಪಾಯಿ ಕೊಟ್ಟೆ. ಮುತ್ತುಗದ ಎಲೆ ಮೇಲೆ ನಂಗೊಂದು, ಕಂಠಿಗೊಂದು ವಡೆ ಕೊಟ್ಟ ವೇಲು.

ಕಂಠಿ ಗಬಗಬ ಅಂತ ತಿಂದು, ನನಗೂ ಬೇಗ ತಿನ್ನೋ ಅಂತ ಹೇಳ್ತಿದ್ದ. ನಿದಾನವಾಗಿ ತಿನ್ನೋಣ ಅಂತ ನಾನು ಬೆಂಚಿನ ಮೇಲೆ ಕೂತೆ. ಆಗ ಎಲ್ಲಿಂದಲೋ ಭರ್ರಂತ ಒಂದು ದೊಡ್ಡ ಕಾಗೆ ಬಂದು ನನ್ನ ಕೈಲಿದ್ದ ವಡೇನ ಕಿತ್ತುಕೊಂಡು ಹಾರಿಹೋಯ್ತು. ಕಂಠಿ ನಗ್ತಾ ನಿಂತಿದ್ದ. ಇದಕ್ಕೆ ಹೇಳಿದ್ದು ಬೇಗ ತಿನ್ನು ಅಂತ ಅಂದು, ಇನ್ನೊಂದು ತಮಾಷೆ ತೋರಿಸ್ತೀನಿ ಬಾ ಅಂತ ಅಂಗಡಿ ಹಿಂಭಾಗಕ್ಕೆ ಕರೆದುಕೊಂಡು ಹೋದ. ನಾನು ನೋಡುತ್ತಿದ್ದ ಹಾಗೇ, ಅದೇ ಕಾಗೆ ಹಾರಿಬಂದು ಅದರ ಬಾಯಲ್ಲಿದ್ದ ವಡೇನ ಅಲ್ಲಿಟ್ಟಿದ್ದ ಪಾತ್ರೇಲಿ ಹಾಕಿ ಹಾರಿಹೋಯಿತು. ಈಗ ಗೊತ್ತಾಯ್ತಾ ಏನಾಗ್ತಿದೇ ಅಂತ. ವೇಲು ಗಿರಾಕಿಗೆ ವಡೆ ಕೊಟ್ಟಕೂಡಲೇ ಮುರುಗಾ ಅಂತ ಕೂಗ್ತಾನೆ. ಆತನ ಕಾಗೆ ಕೂಡಲೇ ಹಾರಿ ಬಂದು ಗಿರಾಕಿ ಕೈಲಿದ್ದ ವಡೇನ ಹಾರಿಸಿಕೊಂಡು, ಮೇಲಕ್ಕೆ ಹಾರುತ್ತೆ. ಒಂದು ಸುತ್ತು ಹಾಕಿ ಅದು ಮತ್ತೆ ಅಂಗಡಿ ಹಿಂಭಾಗಕ್ಕೆ ಬಂದು ವಡೇನ ವೇಲು ಇಟ್ಟಿರುವ ಪಾತ್ರೆಗೆ ಹಾಕತ್ತೆ. ಮತ್ತೆ ಅದೇ ವಡೇನ ಇನ್ನೊಂದು ಗಿರಾಕಿಗೆ ಕೊಡ್ತಾನೆ ವೇಲು. ಏನು ಬುದ್ಧಿ ಇದೆ ನೋಡು ಕಾಗೆಗೆ.

ಈ ಕಥೆ ಹೇಳಿ ಮಲ್ಲಾರಿ ಪ್ರಶ್ನೆ ಹಾಕಿದ

''ಅಮೆರಿಕದ ರುಬೊ ಹೆಚ್ಚೊ, ನಮ್ಮೂರ ಕಾಗೆ ಹೆಚ್ಚೊ?''

ಸೂರ್ಯ ಗರ್ವ ಭಂಗ ಪ್ರಹಸನ

-ಎಚ್.ಡಿ. ಚಂದ್ರಪ್ಪಗೌಡ

(1995ನೇ ಇಸವಿ ಅಕ್ಟೋಬರ್ ತಿಂಗಳ ಒಂದು ಸಾಯಂಕಾಲದ ಸಮಯ. ಇನ್ನೂ ಸೂರ್ಯಾಸ್ತಮಯವಾಗಿಲ್ಲ. ಆದಗೆ ಆಗಸದ ಸ್ವಲ್ಪ ದೂರದಲ್ಲೇ ಚಂದ್ರನ ಉದಯವಾಗಿದೆ. ಸೂರ್ಯ - ಚಂದ್ರರ ಸಂಭಾಷಣೆ ಆರಂಭವಾಗುತ್ತದೆ.)

ಸೂರ್ಯ : (ಗಹಗಹಿಸಿ ನಗಲು ಶುರು ಮಾಡುತ್ತಾನೆ)

ಅ ಹಾ ಹ, ಹ ಹಾ, ಆ ಹಾ ಹಾ....

ಚಂದ್ರ : (ನಗುವನ್ನು ಕೇಳಿಸಿಕೊಂಡು ಆಶ್ಚರ್ಯಭರಿತನಾಗಿ ಅತ್ತಿತ್ತಾ ನೋಡುತ್ತಾ, ಹತ್ತಿರದಲ್ಲೆ ಸೂರ್ಯ ನಗುವುದನ್ನು ಗಮನಿಸುತ್ತಾನೆ) - ಓಹೋ, ಸೂರ್ಯಭಗವಾನನೋ ನಗುತ್ತಿರುವುದು. ಏನು ವಿಶೇಷ? ಅಷ್ಟೊಂದು ನಗಬೇಕಾದ ಸಮಾಚಾರ?

ಸೂರ್ಯ : ಏನಿಲ್ಲ ನಗುವಂತಾಯಿತು. ನಕ್ಕೆ, ಅಷ್ಟೇ.

ಚಂದ್ರ : ಸುಮ್ ಸುಮ್ಮನೆ ನಗುವವರನ್ನು ಏನೆಂದು ಕರೆಯುತ್ತಾರೆಂಬುದು ಭಾಸ್ಕರನಿಗೆ ಗೊತ್ತಿರಬೇಕಲ್ಲವೆ? ಅದರಲ್ಲೂ ಭೂಲೋಕದಲ್ಲಿ ಈಗ ಎಲ್ಲರೂ ಎಚ್ಚರವಾಗಿರುತ್ತಾರೆ. ಅವರೇನಾದರೂ ನಿನ್ನನ್ನು ನೋಡಿದರೆ ಏನೆಂದುಕೊಳ್ಳುತ್ತಾರೋ?

ಸೂರ್ಯ : ಏನೆನ್ನುತ್ತಾರಯ್ಯ, ಚಂದ್ರಾ?

ಚಂದ್ರ : ಇನ್ನೇನನ್ನುತ್ತಾರೆ, ಸೂರ್ಯನಿಗೆ ಹುಚ್ಚು ಹಿಡಿದಿದೆ ಎಂದುಕೊಳ್ಳುತ್ತಾರೆ.

ಸೂರ್ಯ : ಹಾಗೋ, ಇರಬಹುದು. ಆದರೆ ಅದು ನನಗಲ್ಲ, ಹುಚ್ಚು ಹಿಡಿದಿರುವುದು ನಿನಗೇ ಎಂದು ಅವರು ಎಂದೋ ತಿಳಿದಿದ್ದಾರೆ. ಅದರಿಂದಲೇ ನಾನು ನಕ್ಕಿದ್ದು. ಇನ್ನಾದರೂ ತಿಳಿಯಿತೇ?

ಚಂದ್ರ : ಏನೆಂದೆ? ನನಗೆ ಹುಚ್ಚೇ? ನನಗಿಂತ ಹಿರಿಯವನೆಂಬ ಮರ್ಯಾದೆಯಿಂದ ಮಾತನಾಡಿಸಿದರೆ ನನ್ನನ್ನು ಕುಚೋದ್ಯ ಮಾಡಲಾರಂಭಿಸಿದೆಯಾ, ಸೂರ್ಯ? ಅದೇಗಪ್ಪಾ ನನಗೆ ಹುಚ್ಚು ಹಿಡಿದಿರುವುದು?

ಸೂರ್ಯ : ಅದನ್ನು ಹೇಳೊದೇನು ಬಂತು. ನೀನು ವರ್ಷವಿಡೀ ಆಕಾಶದಲ್ಲಿ ಸುತ್ತುತ್ತಾ ಇದೀಯಲ್ಲಾ, ಅದರಿಂದ ಯಾವ ಮಹಾಕಾರ್ಯ ಸಾಧಿಸ್ತಾ ಇದೀಯಪ್ಪಾ? ನಿನ್ನಿಂದ ಯಾರಿಗೆ ಉಪಕಾರವಾಗ್ತಿದೆ, ಹೇಳು ನೋಡೋಣ? ನೋಡು, ನಾನಾದರೋ ಇಡೀ ವಿಶ್ವಕ್ಕೇ ಬೆಳಕು ಮತ್ತು ಶಾಖವನ್ನು ಕೊಡುತ್ತಿದ್ದೇನೆ. ನಾನಿಲ್ಲದಿದ್ದರೆ ಜಗತ್ತಿನಲ್ಲಿ ಚರಾಚರಾ ವಸ್ತುಗಳು ಬದುಕಲು ಸಾಧ್ಯವೇ?

ಅ ಹಾ ಹ ಹ ಹಾ.

ಚಂದ್ರ : ಹಾಗೋ, ನಿನ್ನಿಂದಲೇ ಸಕಲ ಜೀವಿಗಳೂ ಬದುಕುತ್ತಿವೆ ಎಂಬ ಜಂಭವೇ? ರಾತ್ರಿಯಲ್ಲಿ ನೀನಿಲ್ಲದಿದ್ದಾಗ ಯಾರೂ ಬದುಕುವುದಿಲ್ಲವೇ? ದಿನವೆಲ್ಲಾ ನಿನ್ನ ಬಿಸಿಲಿನ ತಾಪದಿಂದ ಬೆಂದು ಬಳಲಿದ ಜೀವ ಜಗತ್ತಿಗೆಲ್ಲಾ ತಂಪನ್ನುಂಟುಮಾಡಿ ಪ್ರಶಾಂತಿಯನ್ನುಂಟು ಮಾಡುವುದು ನಾನಲ್ಲವೇ? ನಿನ್ನ ಬಿಸಿಲಿನ ರಭಸಕ್ಕೆ ಬೇಸತ್ತವರು ತಿಂಗಳ ಬೆಳಕನ್ನೇ ಎದುರು ನೋಡುತ್ತಿರುತ್ತಾರೆ. ನನ್ನ ಪೂರ್ಣ ಪ್ರಕಾಶವಾಗುವ ಹುಣ್ಣಿಮೆ ಯಾವಾಗ ಬರುತ್ತದೋ ಎಂದು ಜನ ಕಾಯುತ್ತಿರುವುದನ್ನು ನೀನು ಕೇಳಿರಲಿಕ್ಕಿಲ್ಲ. ಕನ್ನಡದ ನಟ ಸಾರ್ವಭೌಮ ರಾಜಕುಮಾರ ಹಾಡಿದ ''ರಾತ್ರಿಗಳೆಲ್ಲಾ ಹುಣ್ಣಿಮೆಯಾದರೇ.....'' ಹಾಡನ್ನಾದರೂ, ಭೂಮಿಯಿಂದ ಕೇಳಿ ಬರುವ ಮೈಕಾಸುರನ ವಾಣಿಯಲ್ಲಿ ಕೇಳಿ ನೋಡು ಆಗ ತಿಳಿಯುತ್ತದೆ ನನ್ನ ಯೋಗ್ಯತೆ ಏನೆಂಬುದು.

ಸೂರ್ಯ : ಯಾರು, ನಿನ್ನ ತಿಂಗಳ ಬೆಳಕಿಗೆ ಹಾತೊರೆಯುತ್ತಾರಯ್ಯ, ಈ ಕಾಲದಲ್ಲಿ? ರಾತ್ರಿ ಆಕಾಶದಲ್ಲಿ ತಿರುಗಾಡುವಾಗ ಸ್ವಲ್ಪ ಭೂಮಿ ಕಡೆ ದಿಟ್ಟಿಸಿ ನೋಡು. ಈಗ ಅಲ್ಲಿನ ಜನರಿಗೆ ನಿನ್ನ ಹುಣ್ಣಿಮೆ-ಅಮವಾಸ್ಯೆಗಳ ಗಮನದಲ್ಲಿ ಯಾರಿದ್ದಾರೆ? ಅವರೇ ಕೃತಕವಾಗಿ ಸೃಷ್ಟಿಸಿರುವ ವಿದ್ಯುತ್ ದೀಪಗಳ ಸಹಾಯದಿಂದ ರಾತ್ರಿಯನ್ನೇ ಹಗಲಿನ ಹಾಗೆ ಮಾಡಿರುವರಲ್ಲಾ? ಈಗ, ಹಿಂದಿನಂತೆ ನಿನ್ನನ್ನು ದೇವರೆಂಬ ಭಾವನೆಯನ್ನು ಸಹಾ ತ್ಯಜಿಸಿ, ನಿನ್ನ ಲೋಕಕ್ಕೆ ಹಾರಿ ಬಂದು, ನಿನ್ನ ಮೇಲೆ ತಿರುಗಾಡಿ, ಒದ್ದು ಹೋಗಿರುವುದು ಸಾಲದೇ? ಮರ್ಯಾದೆ ಇಲ್ಲದವರ ಹಾಗೆ ತಿಂಗಳ ಬೆಳಕಿನ ಬಗ್ಗೆ ಉದ್ದುದ್ದ ಪ್ರಲಾಪ ಬೇರೆ ಮಾಡುತ್ತೀ.

ಚಂದ್ರ : ಸೂರ್ಯ, ನಿನ್ನ ತಲೆ ಹರಟೆ ಬಹಳ ಮುಂದುವರಿಯುತ್ತಿದೆಯಲ್ಲಾ. ವಿದ್ಯುತ್ ದೀಪಗಳ ಉದಯ ನಿನ್ನ ಜಂಭಕ್ಕೆ ಸವಾಲು ಕಣಯ್ಯ. ನನ್ನಿಂದಲೇ ಬೆಳಕು, ಶಾಖ, ಎಲ್ಲಾ ಎಂದುಕೊಂಡು, ಹಗಲು-ರಾತ್ರಿಗಳೆಂಬ ಕಣ್ಣುಮುಚ್ಚಾಲೆ ಆಡಿ, ಜನಗಳಿಗೆ ನೀನು ಕೊಡುತ್ತಿದ್ದ ತೊಂದರೆಗಳ ನಿವಾರಣೆಗಾಗಿಯೇ ಅಲ್ಲವೇ ಅವರು ವಿದ್ಯುತ್ ದೀಪಗಳನ್ನು ಕಂಡು ಹಿಡಿದದ್ದು? ಅವುಗಳ ಪ್ರಕಾಶದೆದುರು ನೀನೆಲ್ಲಿ? ಜನ ಈಗ ನಿನ್ನನ್ನು ದಿಕ್ಕರಿಸಿ, ಸದಾ ಅವರ ಹೆಸರಿನಲ್ಲಿ ಮಗ್ನರಾಗಿರುತ್ತಾರೆ. ಶಾಂತಿ ಪ್ರಿಯನಾದ ನಾನು, ಜನಗಳ ಮನಸ್ಸನ್ನು ಪ್ರಶಾಂತಗೊಳಿಸಿ, ಅವರನ್ನು ಸಂತೋಷಪಡಿಸುತ್ತಿರುವುದು, ನಿನಗೆ ಹೊಟ್ಟೇ ಕಿಚ್ಚಾಗಿರಬೇಕಲ್ಲವೆ? ಅದರಿಂದಲೇ ಕಾಲು ಕೆದರಿ ಜಗಳಕ್ಕಿಳಿದಿರುವುದು.

ಸೂರ್ಯ : ನೀನು ಶಾಂತವಾಗಿರುವುದೇನು ಬಂತಯ್ಯಾ? ನಿನ್ನ ಯೋಗ್ಯತೆಯೇ ಅಷ್ಟು. ಅಂದು ಚೌತಿಯ ವಿನಾಯಕನನ್ನು ನೋಡಿ ನಕ್ಕಿದ್ದಕ್ಕೆ ನಿನಗೆ ಸರಿಯಾದ ಶಾಸ್ತಿಯಾಯಿತಲ್ಲ. ಚೌತಿಯ ದಿನ, ಜನರು ನಿನ್ನನ್ನು ಕಣ್ಣೆತ್ತಿನೋಡದ ಹಾಗೆ ಶಾಪ ಕೊಟ್ಟಿದ್ದು ಸಾಲದೇ, ನಿನ್ನ ಶೌರ್ಯಕ್ಕೆ ಸಾಕ್ಷಿ? ನಾನಾಗಿದ್ದರೆ ಅವನನ್ನು ಸುಟ್ಟು ಭಸ್ಮ ಮಾಡುತ್ತಿದ್ದೆ.

ಚಂದ್ರ : ಸರಿಯಪ್ಪಾ, ನಿನ್ನ ಹಾಗೆ, ನಾನು ಇತರರಿಗೆ ಕೆಡಕನ್ನುಂಟು

ಮಾಡುವವನಲ್ಲ. ಶಿವ-ಪಾರ್ವತಿಯರ ಮಗನೆಂದು ಅವನನ್ನು ಕ್ಷಮಿಸಬೇಕಾಯಿತು. ಮೇಲಾಗಿ ಶಿವನ ತಲೆಯ ಮೇಲೇ ಇದ್ದುಕೊಂಡು, ಅವನ ಮಗನಿಗೆ ಕೆಡಕು ಮಾಡಿದರೆ ಯಾರಾದರೂ ಏನು ಹೇಳಿಯಾರು? ಜನ ಚೌತಿಯ ದಿನ ನೋಡದಿದ್ದರೇನಾಯಿತು. ಯುಗಾದಿಯ ದಿನ ನನ್ನನ್ನು ಅರಸಿ, ನೋಡುವುದಿಲ್ಲವೇ? ನಿನ್ನಿಂದ ಜನಗಳಿಗಾಗುವ ತೊಂದರೆಗಳೇ ಗೊತ್ತಾಗುವುದಿಲ್ಲವಲ್ಲಾ? ಬೆಳಕಿದೆಯೆಂದು ಜನ ತಮ್ಮ ಕೆಲಸ ಕಾರ್ಯದಲ್ಲಿ ತೊಡಗಿರುವಾಗ, ನೀನು ಹೊತ್ತಾಯಿತು ಎಂದು ಓಡಿ ಹೋಗುತ್ತಿ, ಕತ್ತಲಾಯಿತು ಎಂದು ಜನ ಮಲಗಿ ವಿಶ್ರಾಂತಿ ಪಡೆಯುತ್ತಿದ್ದರೆ, ಆಗಲೇ ಬೆಳಗಾಯಿತು ಎಂದು ಮುಖ ತೋರಿಸುತ್ತೀ. ಎಷ್ಟು ಬೇಗ ಬೆಳಗಾಯಿತಪ್ಪ ಎಂದು ನಿನ್ನನ್ನು ಶಪಿಸಿ ಮೇಲೇಳುತ್ತಾರೆ. ಹಗಲಿನಲ್ಲಂತೂ ಬಿಸಿಲಿನ ಝಳಕದಿಂದ ಸಕಲ ಜೀವ ರಾಶಿಗಳನ್ನೂ ಬೇಯಿಸಿ, ಅವರನ್ನು ಗೋಳಿಗೀಡು ಮಾಡುತ್ತೀ. ನಿನ್ನ ತಿರುಗಾಟದಿಂದ ಯಾವ ಪ್ರಯೋಜನವೋ, ನನಗಂತೂ ತಿಳಿಯದು.

ಸೂರ್ಯ : ಏನಂದೀ? ನಾನು ನಿಷ್ಪ್ರಯೋಜಕನೇ? ಜನ ಬೆಳಿಗ್ಗೆ ಏಳುವಾಗ ಸೂರ್ಯ ನಮಸ್ಕಾರ, ಸಾಯಂಕಾಲ ಸಂಧ್ಯಾವಂದನೆಗಳನ್ನು ಮಾಡಿ, ನನಗೆ ಗೌರವ ಸೂಚಿಸುವುದು, ಅವರಿಗೆ ನನ್ನಿಂದಾಗುವ ಉಪಕಾರ ಸ್ಮರಣೆಯಲ್ಲವೇ? ನನ್ನಿಂದಲೇ ಬೈಗು ಬೆಳಗಾಗುವುದು ಎಲ್ಲರಿಗೂ ಗೊತ್ತಿರುವುದೇ. ನಿನ್ನಂತಹ ಹೇಡಿಗಳಿಗೆ ತಿಳಿಯದಿದ್ದರೆ, ನನ್ನ ಪ್ರಕಾಶಕ್ಕೇನೂ ಕುಂದಿಲ್ಲ. ನೋಡು, ಈಗ ಹಗಲಿನಲ್ಲಿ ನೀನು ಕಾಣಿಸಿಕೊಂಡಿದ್ದರೂ, ನಿನ್ನಿಂದ ಅದೆಷ್ಟು ಬೆಳಕಿದೆ? ಸುಮ್ಮನೆ ಅಸಂಬದ್ಧ ಪ್ರಲಾಪ ಮಾಡುವುದಕ್ಕೆ ನಿನಗೆ ನಾಚಿಕೆಯೂ ಇಲ್ಲವಲ್ಲಾ ಅಂತೀನಿ. ಅದರಿಂದಲೇ ನಿನಗೆ ಹುಚ್ಚು ಎಂದು ನಾನು ಆಗಲೆ ನಕ್ಕಿದ್ದು, ಈಗಲಾದರೂ ತಿಳಿಯಿತೇ?

ಚಂದ್ರ : (ಸಿಟ್ಟಿನಿಂದ ಆರ್ಭಟಿಸುತ್ತಾ) ಏನೆಂದೇ ಸೂರ್ಯ ನಾನೊಬ್ಬ ಹೇಡಿಯೆಂದೇ ಮತ್ತೆ ಹುಚ್ಚನೆಂದೇ? ನನ್ನ ಶಾಂತ ಸ್ವಭಾವ, ನಿನ್ನಲ್ಲಿರುವ ಪಿತ್ತವನ್ನು ನೆತ್ತಿಗೇರಿಸಿದಂತಿದೆ. ಮಹಾಭಾರತದ ಯುದ್ಧದಲ್ಲಿ ಜಗದೇಕ ವೀರನೆಂದು ಹೆಸರಾದ ಪಾರ್ಥನ ಜೀವವು, ನಿನ್ನ ನಿಯಮಿತ ಗತಿಯನ್ನು ನಂಬಿ ಕುಳಿತಿದ್ದರೆ, ವ್ಯರ್ಥವಾಗುತ್ತಿತ್ತು. ಶ್ರೀ ಕೃಷ್ಣಪರಮಾತ್ಮನ ಸುದರ್ಶನ ಚಕ್ರದ ನೆರವಿಗೆ ಬಂದು, ನಿನ್ನ ಚಲನೆಯನ್ನು ಹಿಡಿದು ನಿಲ್ಲಿಸಿದ್ದು ಜ್ಞಾಪಕವಿಲ್ಲವೇ? ಮೊನ್ನೆ ಮೊನ್ನೆ ಭಾರತದಲ್ಲಿ ನೀನೊಬ್ಬ ಮಹಾನುಭಾವನೆಂದು ನಿನ್ನ ಹೆಸರಿನ ಬಾಹ್ಯಾಕಾಶ ನೌಕೆಯನ್ನು ಉಡಾಯಿಸಿದರೆ, ಅದು ಕೆಲಸವನ್ನೇ ಮಾಡಲಿಲ್ಲ. ನನ್ನ ಹೆಸರಿನ 'ಲೂನಾ' ನೌಕೆಗಳಿಂದ ಅದೆಷ್ಟು ಉಪಕಾರಗಳಾಗಿವೆ, ನೋಡು. ಸುಮ್ಮನೆ ಬಾಯಿಗೆ ಬಂದಂತೆ ಹರಟುತ್ತಾ, ನನ್ನನ್ನು ರೇಗಿಸಿದರೆ, ನಿನಗೆ ಸರಿಯಾದ ಪಾಠ ಕಲಿಸಬೇಕಾದೀತು. ಸ್ವಲ್ಪ ನಾಲಿಗೆ ಹಿಡಿದು ಮಾತನಾಡು ಜೋಕೆ.

ಸೂರ್ಯ : ಯಾರನ್ನಯ್ಯಾ ನೀನು ಹೆದರಿಸೋದು, ಅಜ್ಜಿ ಪುರಾಣದ ಕತೆಗಳನ್ನು ಹೇಳಿ, ಈ ಸೂರ್ಯನನ್ನು ಗದರಿಸುತ್ತೀಯಲ್ಲಾ, ಕೈಲಾಗದವನು ಮೈ ಪರಚಿಕೊಂಡ ಎಂಬಂತೆ, ಆ ಹಾ ಹ ಹ ಹಾ.... ನಿನ್ನಿಂದ ಏನು ಮಾಡಲು

ಸಾಧ್ಯ ನೋಡಿಕೊಳ್ಳುತ್ತೇನೆ.

ಚಂದ್ರ : ಸೂರ್ಯ, ಇನ್ನು ನನ್ನ ಸಹನೆ ಮೀರಿತು. ನೀನು ಬಹಳ ಸೊಕ್ಕಿಹೋಗಿರುವೆ ನಿನಗೆ ಬುದ್ಧಿ ಕಲಿಸಬೇಕು. ಇದೋ ನೋಡು ನನ್ನ ಪ್ರತಿಜ್ಞೆ. ಇನ್ನೂ ಮೂರೆ ದಿನಗಳಲ್ಲಿ, ನಡು ಹಗಲಿನಲ್ಲೇ ನಿನ್ನನ್ನು ಅಡ್ಡಗಟ್ಟುತ್ತೇನೆ. ಪ್ರಪಂಚವನ್ನೆಲ್ಲಾ ಕತ್ತಲ ಕಡಲಿನಲ್ಲಿ ಮುಳುಗಿಸುತ್ತೇನೆ. ನಿನ್ನ ಪ್ರಕಾಶವೇ ಇಲ್ಲದಂತೆ ಮಾಡುತ್ತೇನೆ. ಇದೇ ನನ್ನ ಶಾಪ.

(ಸೂರ್ಯ - ಚಂದ್ರರ ಈ ಜಗಳವನ್ನು ಕೇಳುತ್ತಿದ್ದ ದೇವತೆಗಳು, ಚಂದ್ರನ ಶಪಥವನ್ನು ಕೇಳಿ ತತ್ತರಿಸಿ ಹೋದರು. ಭೂಲೋಕ ನಡುಗಿತು. ಮುಂದೇನಾಗುವುದೆಂದು ಎಲ್ಲರೂ ಕಳವಳಗೊಂಡರು. ಜಗದ್ರಕ್ಷಕನಾದ ಶ್ರೀಮನ್ನಾರಯಣನೇ ಗತಿಯೆಂದು, ದೇವತೆಗಳೆಲ್ಲಾ ವೈಕುಂಠಕ್ಕೆ ಧಾವಿಸಿ, ಅವನಿಗೆ ಮೊರೆಯಿಟ್ಟರು)

ದೇವೇಂದ್ರ: ಶ್ರೀ ಹರಿ, ಗೋವಿಂದಾ, ನಾರಾಯಣಾ, ಕಾಪಾಡಬೇಕು. (ಎಲ್ಲರೂ ನಮಸ್ಕರಿಸುವರು.)

ಶ್ರೀ.ನಾ. : ಎದ್ದೇಳಿ, ಎದ್ದೇಳಿ, ಏನು ಎಲ್ಲರೂ ಅವಸರದಿಂದ ಬಂದಿದ್ದೀರಿ?

ದೇವೇಂದ್ರ: ಪ್ರಭೂ, ಸೂರ್ಯ-ಚಂದ್ರರಲ್ಲಿ ಜಗಳವಾಗಿದೆ. ಚಂದ್ರನು ಇನ್ನು ಮೂರು ದಿನಗಳಲ್ಲಿ ಸೂರ್ಯನನ್ನು ನಡು ಹಗಲಿನಲ್ಲಿಯೇ ಅಡ್ಡಗಟ್ಟಿ ಜಗತ್ತನ್ನೆಲ್ಲಾ ಕತ್ತಲು ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದಾನೆ. ಹಾಗಾದರೆ ಜಗತ್ತಿನ ಚರಾಚರಾ ಜೀವಿಗಳ ಪಾಡೇನು, ನಮ್ಮ ಪಾಡೇನು, ಭಗವಂತ, ನೀನೇ ಕಾಪಾಡಬೇಕು.

ಶ್ರೀ.ನಾ. : ಹೀಗೂ ಉಂಟೇ? ಶಾಂತ ಸ್ವರೂಪಿಯಾದ ಚಂದ್ರನು ಅಂತಹ ಘೋರ ಶಪಥ ಮಾಡುವಂತಹನಲ್ಲವಲ್ಲ. ನೀವೆಲ್ಲಾ, ಪರಿಸ್ಥಿತಿ ಅಷ್ಟಕ್ಕೆ ಹೋಗಲು ಬಿಡಬಾರದಾಗಿತ್ತು. ಆದರೆ ಈ ವಿಷಯದಲ್ಲಿ ನಾನು ಹೆಚ್ಚು ಸಹಾಯ ಮಾಡಲಾರೆ. ಚಂದ್ರನನ್ನು ಶಿರದಲ್ಲಿ ಧರಿಸಿರುವ ಈಶ್ವರನೇ ಈ ಸಂಕಟವನ್ನು ಪರಿಹರಿಸಬಲ್ಲನು. ಚಂದ್ರನೂ, ಅವನ ಬುದ್ಧಿವಾದಕ್ಕೆ ಮಣಿಯುವನು. ನೀವೆಲ್ಲರೂ ಶಿವನಲ್ಲಿಗೆ ಹೋಗಿ ಪ್ರಾರ್ಥಿಸಿರಿ. ನಿಮಗೆ ಶುಭವಾಗಲಿ.

ದೇವೇಂದ್ರ: ಆಗಲಿ, ಮಹಾಪ್ರಭೂ, ನಿಮ್ಮ ಇಷ್ಟದಂತೆ ನಡೆದುಕೊಳ್ಳುತ್ತೇವೆ.

(ಕೈ ಮುಗಿದು ಎಲ್ಲರೂ ನಿರ್ಗಮಿಸುವರು.)

(ಕೈಲಾಸದಲ್ಲಿ ಪರಮೇಶ್ವರ - ಪಾರ್ವತಿಯರು, ಸರಸ ಸಲ್ಲಾಪವಾಡುತ್ತಾ ಕುಳಿತಿರುವರು, ದೇವತೆಗಳೆಲ್ಲಾ ಹೋಗಿ ನಮಸ್ಕರಿಸುವರು.)

ದೇವೇಂದ್ರ: ಶಂಭೋ, ಶಂಕರ, ಪರಮೇಶ್ವರ, ಕಾಪಾಡು, ಕಾಪಾಡು - (ಎಲ್ಲರೂ ನಮಸ್ಕರಿಸುವರು.)

ಪರಮೇಶ್ವರ : ಎದ್ದೇಳಿ, ಎದ್ದೇಳಿ, ಏನೋ ಅನಾಹುತವಾದಂತಿದೆ, ಹೇಳಿ, ಹೇಳಿ.

ದೇವೇಂದ್ರ: ಪ್ರಭೂ ಹೇಳುವುದೇನು, ಜಗತ್ತೇ ಕತ್ತಲ ಕಡಲಿನಲ್ಲಿ ಮುಳುಗಲಿದೆ. ಸೂರ್ಯ-ಚಂದ್ರರು ಜಗಳವಾಡಿದ್ದಾರೆ. ಚಂದ್ರನು ಸೂರ್ಯನನ್ನು

ಅಡ್ಡಗಟ್ಟುವುದಾಗಿ ಶಪಥ ಮಾಡಿದ್ದಾನೆ. ಜಗತ್ತೇ ಅಲ್ಲೋಲಕಲ್ಲೋಲವಾಗುತ್ತಿದೆ. ಶ್ರೀಮನ್ನಾರಾಯಣನು ನಮ್ಮನ್ನು ನಿಮ್ಮಲ್ಲಿಗೆ ಕಳುಹಿಸಿದ್ದಾನೆ. ಕಾಪಾಡಬೇಕು, ಕಾಪಾಡಬೇಕು.

ಪರಮೇಶ್ವರ : ಹಾಗೋ, ಮಹಾ ವಿಷ್ಣುವಿಗೇ ಆಗದಿರುವುದು ನನ್ನಿಂದ ಸಾಧ್ಯವೇ.

ದೇವೇಂದ್ರ: ಚಂದ್ರಶೇಖರ, ಚಂದ್ರನು ನಿನ್ನ ಶಿರದಲ್ಲೇ ಪವಡಿಸಿರುವವನಲ್ಲವೇ? ನೀವು ಬುದ್ಧಿ ಹೇಳಿದರೆ ಅವನು ಶಾಂತನಾಗಬಹುದು. ಅಷ್ಟೊಂದು ಮನಸ್ಸು ಮಾಡಿದರೆ ಜಗತ್ತಿನ ಜೀವಜಂತುಗಳು ಬದುಕಬಹುದು ಕೃಪೆ ಮಾಡು ಪರಮಾತ್ಮಾ.

ಪರಮೇಶ್ವರ : ಆಗಲಿ, ಪ್ರಯತ್ನ ಮಾಡುವ, (ಮೇಲೆ ತಿರುಗಿ) ಚಂದ್ರಾ, ಏನು ಸಮಾಚಾರ, ಬಹಳ ಕೋಪಗೊಂಡಿರುವಂತಿದೆಯಲ್ಲಾ?

ಚಂದ್ರ : ವಂದಿಸಿದೆ, ಮಹಾಪ್ರಭೂ, ಇದೇನು ಸಡಗರ, ದೇವತೆಗಳೆಲ್ಲಾ ನೆರೆದಿದ್ದಾರಲ್ಲಾ, ಸ್ವಾಮಿ.

ಪರಮೇಶ್ವರ : ಹೌದು, ನೆರೆದಿದ್ದಾರೆ, ಸೂರ್ಯನಿಗೂ, ನಿನಗೂ ಅದೇನೋ ಜಗಳವಾಗಿ, ಜಗತ್ತಿಗೆ ಕಂಟಕವಾಗುವಂತಿದೆಯಂತೆ. ಅದೇನು ಸಮಾಚಾರ, ನನಗೆ ಹೇಳಲೇ ಇಲ್ಲವಲ್ಲಾ.

ಚಂದ್ರ : ನಿಜ, ಮಹಾಪ್ರಭೂ, ನಿಮ್ಮ ಶಿರದಲ್ಲೇ ಇರುವ ನಾನು ಸದಾ ಶಾಂತಚಿತ್ತನಾಗಿದ್ದುಕೊಂಡು, ಇಡೀ ಜಗತ್ತಿನಲ್ಲೇ ಶಾಂತಿ ನೆಲೆಸಲು ನಾನೆಸಗುತ್ತಿರುವ ಕಾರ್ಯ ನಿನಗೆ ವೇದ್ಯವಿರಬೇಕಲ್ಲವೆ? ಗರ್ವದ ಪಿತ್ತ ನೆತ್ತಿಗೇರಿರುವ ಸೂರ್ಯ ನನ್ನನ್ನು ಹೇಡಿ, ನಿಷ್ಪ್ರಯೋಜಕ, ಎಂದೆಲ್ಲಾ ಗೇಲಿ ಮಾಡಿ ನಗೆಯಾಡುತ್ತಿದ್ದಾಗ, ಅವನಿಗೆ ಸಾಕಷ್ಟು ವಿವೇಚನೆ ಹೇಳಿದೆ. ಆದರೂ ಕೇಳದೇ ತನ್ನಿಂದಲೇ ಬೈಗು ಬೆಳಗಾಗುವುದು, ಚರಾ-ಚರಾ ಜಗತ್ತು ಜೀವಿಸುತ್ತಿರುವುದು ಎಂದೆಲ್ಲಾ ಜಂಬ ಕೊಚ್ಚಿಕೊಂಡ, ನಾನೊಬ್ಬ ಹುಚ್ಚನೆಂದೂ ಹಿಯ್ಯಾಳಿಸಿದನು. ಇಷ್ಟಾದ ಮೇಲೆ ನಾನು ಸುಮ್ಮನಿರಲು ಸಾಧ್ಯವೇ. ಅತ್ಯಂತ ಶ್ರೇಷ್ಠವಾದ ತಮ್ಮ ಶಿರದಮೇಲೆ ನನಗೆ ಸ್ಥಾನ ಕೊಟ್ಟಿರುವ ನಿಮ್ಮ ಘನತೆಗೂ ಕುಂದು ಬರುವುದಿಲ್ಲವೇ ಪರಮಾತ್ಮಾ. ಆದ್ದರಿಂದ ನಾನು ಸೂರ್ಯನನ್ನು ಅಡ್ಡಗಟ್ಟುವ ಪ್ರತಿಜ್ಞೆ ಮಾಡಲೇಬೇಕಾಯಿತು. ಅವನಿಂದಲೇ ಎಲ್ಲವೂ ಆಗುವುದಿಲ್ಲವೆನ್ನುವುದನ್ನು ಸಾಧಿಸಿ ತೋರಿಸಿ ಕೊಡಲೇಬೇಕಾಗಿದೆ.

ಪರಮೇಶ್ವರ : ನಿಜ, ನಿಜ, ಆ ಸೂರ್ಯನಿಗೆ ಜಂಭ ಬಂದಿರುವುದೇ ನಿಜ, ಅದೇನೇ ಇರಲಿ, ನಿಮ್ಮಿಬ್ಬರ ಜಗಳದಿಂದ ನಿರಪರಾಧಿಗಳಾದ ಈ ದೇವತೆಗಳು ಮತ್ತು ಭೂಲೋಕದ ಸಕಲ ಜೀವರಾಶಿಗಳು ಅಪಾರ ಕಷ್ಟ ನಷ್ಟಗಳಿಗೊಳಗಾಗುವುದಿಲ್ಲವೇ? ಅವರೇನು ಮಾಡಿದ್ದಾರೆ. ಅವರ ಮೇಲೆ ಕರುಣೆ ಇಡು ಚಂದ್ರಾ.

ಚಂದ್ರ : ಆದರೆ ನನ್ನ ಪ್ರತಿಜ್ಞೆ ನೆರವೇರದಿದ್ದರೆ, ನನ್ನ ಪ್ರತಿಷ್ಠೆಗೆ ಹಾಗೂ ನಿಮ್ಮ ಘನತೆಗೆ ಶಾಶ್ವತ ಕುಂದುಂಟಾಗಲಾರದೇ ಪ್ರಭೂ.

ಪರಮೇಶ್ವರ : ಅದೂ ಸರಿಯೇ, ಆದರೆ ನೀನು ಸೂರ್ಯನನ್ನು ಸದಾ ಅಡ್ಡಗಟ್ಟಿ

ನಿಲ್ಲುವುದಾಗಿ ಪ್ರತಿಜ್ಞೆ ಮಾಡಿಲ್ಲವಲ್ಲಾ. ಆದ್ದರಿಂದ ನಿಮಿತ್ತ ಮಾತ್ರವಾಗಿ ಸ್ವಲ್ಪ ಸಮಯ ಸೂರ್ಯನಿಗೆ ಅಡ್ಡನಿಂತು, ನಿನ್ನ ಪರಾಕ್ರಮ ಪ್ರದರ್ಶಿಸಿ ಮತ್ತೆ ಮುಂದೆ ಹೋಗಲು ಸೂರ್ಯನಿಗೆ ದಾರಿ ಬಿಟ್ಟರೆ, ನಿನ್ನ ಪ್ರತಿಜ್ಞೆ ಭಂಗವಾದಂತಾಗುವುದಿಲ್ಲವಲ್ಲಾ, ಅಲ್ಲದೇ ಜಗತ್ತಿನ ಆಗುಹೋಗುಗಳಿಗೆ, ಸೃಷ್ಟಿಯ ಆದಿನಿಂದಲೂ ನಿಮಗಿಬ್ಬರಿಗೂ ನಿಗದಿಯಾದ ಕೆಲಸ ಕಾರ್ಯಗಳನ್ನು ಯಾವ ಚ್ಯುತಿಯೂ ಬಾರದಂತೆ ನಡೆಸಿಕೊಂಡು ಹೋಗುವುದು ನಿಮ್ಮ ಕರ್ತವ್ಯವಲ್ಲವೇ?

ಚಂದ್ರ : ನಿಜ, ಮಹಾಸ್ವಾಮಿ, ಒಳ್ಳೆಯ ಮಾರ್ಗದರ್ಶನ ನೀಡಿದಿರಿ. ನಿಮ್ಮ ಆಜ್ಞೆಯಂತೆ ಕೇವಲ ಒಂದೂವರೆ ನಿಮಿಷಗಳೊಳಗೆ ನನ್ನ ಶಪಥವನ್ನು ಜರುಗಿಸುತ್ತೇನೆ. ಅದರಲ್ಲೂ ಭೂಮಿಯ ಒಂದು ಚಿಕ್ಕ ವಲಯದಲ್ಲಿ ಮಾತ್ರ ಕತ್ತಲಾಗುವಂತೆ ಮಾಡಿ, ಸೂರ್ಯನಿಗೆ ನನ್ನ ಶಕ್ತಿಯ ಪ್ರಭಾವವನ್ನು ತೋರಿಸುತ್ತೇನೆ.

ದೇವೇಂದ್ರ: ಕರುಣಾಮೂರ್ತಿ, ಚಂದ್ರಾ, ಬಹಳ ಉದಾರತೆ ತೋರಿದೆ. ನಾವೆಲ್ಲಾ ನಿನಗೆ ಕೃತಜ್ಞರು.

ಚಂದ್ರ : ಆದರೆ ನನ್ನದೊಂದು ಬಯಕೆಯನ್ನು ಎಲ್ಲರೂ ಈಡೇರಿಸಬೇಕು. ಭೂಲೋಕದ ಜನರು ತಮ್ಮಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳಸಿಕೊಂಡು ಸೃಷ್ಟಿಯಲ್ಲಿರುವ, ಎಲ್ಲಾ ವಸ್ತುಗಳನ್ನು ಪರೀಕ್ಷಿಸಿ ಅವುಗಳ ಗುಟ್ಟನ್ನು ಅರಿತುಕೊಂಡಿದ್ದಾರೆ. ಆಕಾಶದಲ್ಲಿ ನಾನೂ ಸೇರಿದಂತೆ, ಇತರ ಗ್ರಹಗಳ ಶೋಧನೆ ನಡೆಸಿ ಯಶಸ್ವಿಯಾಗಿದ್ದಾರೆ. ಅವರ ಬುದ್ಧಿಬಂತಿಕೆಗೆ ನಾನು ಮೆಚ್ಚಿದ್ದೇನೆ. ಅದರಿಂದ ನನ್ನ ಗುಟ್ಟನ್ನು ಅವರಿಗೆ ಬಿಟ್ಟುಕೊಟ್ಟಿದ್ದೇನೆ. ಆದರೆ ಮಹಾ ಗರ್ವಿಷ್ಟನೂ, ತೀಕ್ಷ್ಣಸ್ವಭಾವದವನೂ ಆದ ಸೂರ್ಯ, ಅವರಿಗೆ ತನ್ನ ಗುಟ್ಟನ್ನು ಬಿಟ್ಟುಕೊಡಲು ನಿರಾಕರಿಸುತ್ತಿದ್ದಾನೆ. ಈಗ ನಾನು ಅವನನ್ನು ಅಡ್ಡಗಟ್ಟುವ ಸಮಯದಲ್ಲಿ, ಸೂರ್ಯನ ಗುಟ್ಟನ್ನು ಅರಿಯಲು ಜನರಿಗೆ ಒಳ್ಳೆಯ ಅವಕಾಶವಾಗುತ್ತದೆ. ತಪ್ಪದೇ ಅವರು ಆಗ ಸೂರ್ಯನ ಶೋಧನೆ ನಡೆಸುವಂತೆ ಮಾಡಿ ಅದರಿಂದ ಅವರಿಗೆ ಮುಂದೆ ಒಳ್ಳೆಯದಾಗಬಹುದು.

ಪರಮೇಶ್ವರ : ದೇವತೆಗಳೇ, ಚಂದ್ರ ಒಳ್ಳೆಯ ಸಲಹೆಯನ್ನೇ ಮಾಡಿದ್ದಾನೆ. ಭೂಲೋಕದ ಜನರಿಗೆ ಈ ವಿಷಯ ತಿಳಿಸಿ ಕಾರ್ಯೋನ್ಮುಖರಾಗುವಂತೆ ಮಾಡಿರಿ.

ಚಂದ್ರ : ನೋಡಿ, ಇನ್ನೂ ಒಂದು ಎಚ್ಚರಿಕೆ ಕೊಡುತ್ತೇನೆ. ಜನರ ಈ ಸಾಹಸ ಕಾರ್ಯವನ್ನು ಸಹಿಸಲಾರದೇ ಮತ್ತು ನನ್ನ ಮೇಲಿನ ಸಿಟ್ಟಿನಿಂದ ನಾನು ಅವನಿಗೆ ಅಡ್ಡಬರುವ ಸಮಯದಲ್ಲಿ, ಅವನನ್ನು ವೀಕ್ಷಿಸುವವರ ಕಣ್ಣುಗಳಿಗೇ ಹಾನಿ ಮಾಡಬಹುದು. ಆದ್ದರಿಂದ ಸೂರ್ಯನನ್ನು ವೀಕ್ಷಿಸುವಾಗ ಕಣ್ಣಿಗೆ ಸರಿಯಾದ ರಕ್ಷಣೆಯ ಸಲಕರಣೆಗಳನ್ನಿಟ್ಟುಕೊಂಡು ನೋಡುವಂತೆ ಎಚ್ಚರಿಕೆ ನೀಡಿರಿ.

ದೇವೇಂದ್ರ: ಬಹಳ ಉಪಕಾರವಾಯಿತು. ನೀವು ಹೇಳಿದಂತೆಯೇ ಮಾಡಿಸುತ್ತೇವೆ.

ಶಂಭೋ, ಶಂಕರ. ಚಂದ್ರಶೇಖರ, ಚಂದ್ರಾ ನಿಮಗೆ ಪ್ರಣಾಮ, ಪ್ರಣಾಮ, ನಾವಿನ್ನು ತೆರಳುತ್ತೇವೆ.

ಪರಮೇಶ್ವರ ಮತ್ತು ಚಂದ್ರ : ಹೋಗಿಬನ್ನಿ, ನಿಮಗೆ ಶುಭವಾಗಲಿ.

ಅಕ್ಟೋಬರ್ 25, 1995

ಹಗಲಿನಲ್ಲೇ ಕತ್ತಲಾಗುತ್ತದೆಂಬ ಸುದ್ದಿ ಭೂಲೋಕದಲ್ಲೆಲ್ಲಾ ಹರಡಿ, ಕೋಲಾಹಲವೆದ್ದಿದೆ. ಸೂರ್ಯ-ಚಂದ್ರರ ಘರ್ಷಣೆ ನಡೆಯುವಾಗ ಆಕಾಶದ ಕಡೆ ದೃಷ್ಟಿ ಹಾಯಿಸುವುದೂ ಅಪಾಯಕರವೆಂದು ಜನ ಹೆದರಿ, ಕೆಲಸಕಾರ್ಯಗಳನ್ನು ಬದಿಗೊತ್ತಿ ತಮ್ಮ ತಮ್ಮ ಮನೆಗಳಲ್ಲಿ ಬಾಗಿಲು ಹಾಕಿ ಅಡಗಿ ಕುಳಿತಿದ್ದಾರೆ. ರಸ್ತೆಗಳಲ್ಲಿ ವಾಹನ ಸಂಚಾರವೂ ಇಲ್ಲ. ಎಲ್ಲಾ ಕಡೆ ನೀರವ, ನಿಶ್ಶಬ್ದ, ದೈವಭಕ್ತಿಯುಳ್ಳವರು ದೇವಸ್ಥಾನಗಳಲ್ಲಿ ಪ್ರಾರ್ಥನೆ, ವಿಶೇಷ ಪೂಜೆಗಳನ್ನೇ ಮಾಡುತ್ತಿದ್ದಾರೆ. ನಾನಾ ದೇಶದ ವಿಜ್ಞಾನಿಗಳು ಚಂದ್ರ-ಸೂರ್ಯರ ಘರ್ಷಣೆಯಿಂದ ಭೂಮಿಯಲ್ಲಿ ಪೂರ್ಣ ಕತ್ತಲಾಗುವ ಪ್ರದೇಶಗಳಲ್ಲಿ ತಮ್ಮ ಯಂತ್ರೋಪಕರಣಗಳನ್ನು ಜೋಡಿಸಿಕೊಂಡು, ಸೂರ್ಯ ಶೋಧನೆಗಾಗಿ ಸಜ್ಜಾಗಿ ನಿಂತಿದ್ದಾರೆ.

ಬೆಳಗಿನ ಎಂಟೂವರೆ ಗಂಟೆ ಸಮಯ ಸೂರ್ಯ ಎಂದಿಗಿಂತಲೂ ಹೆಚ್ಚಿನ ಪ್ರಕಾಶದಿಂದ ಆಕಾಶದಲ್ಲಿ ಪ್ರಜ್ವಲಿಸುತ್ತಾ ಮೇಲೇರುತ್ತಿದ್ದಾನೆ. ಎಂಟು ಗಂಟೆ ಮೂವತ್ತೊಂದು ನಿಮಿಷಕ್ಕೆ ಚಂದ್ರ, ತನ್ನ ಪ್ರತಿಜ್ಞೆಯನ್ನು ಈಡೇರಿಸುವ ಸಲುವಾಗಿ, ಸೂರ್ಯನ ಪಥದತ್ತ ತಿರುಗುತ್ತಾನೆ. ಇನ್ನೊಂದು ನಿಮಿಷದಲ್ಲಿ ಸೂರ್ಯನ ದಾರಿಯನ್ನು ಮೆಟ್ಟುತ್ತಾನೆ. ಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಸೂರ್ಯನನ್ನು ಅಡ್ಡಗಟ್ಟುತ್ತಾ ಮುಂದುವರಿಸುತ್ತಾನೆ. ಭೂಮಿಯಲ್ಲಿ ನಡು ಹಗಲಲ್ಲೇ ಕತ್ತಲಾಗುವ ಚಿಹ್ನೆಗಳು ಕಂಡು ಬರುತ್ತವೆ. ಬಿಸಿಲ ಝಳಕ ಕಡಿಮೆಯಾಗತೊಡಗುತ್ತದೆ. ವಿಜ್ಞಾನಿಗಳು ಸೂರ್ಯ ವೀಕ್ಷಣೆಯನ್ನು ಪ್ರಾರಂಭಿಸುತ್ತಾರೆ ಮುಂದಿನ 20 ನಿಮಿಷಗಳು ಚಂದ್ರ, ಸೂರ್ಯನನ್ನು ಸಂಪೂರ್ಣವಾಗಿ ಅಡ್ಡಗಟ್ಟಿ ನಿಲ್ಲುತ್ತಾನೆ. ಭೂಮಿಯಲ್ಲಿ ಬೆಳಗಾಗುತ್ತಿರುವಂತೆಯೆ ಕತ್ತಲು ಆವರಿಸುತ್ತದೆ. ಜನ ದಿಗ್ಭ್ರಾಂತರಾಗುತ್ತಾರೆ. ಮೃಗಪಕ್ಷಿಗಳು ಗಾಬರಿಯಾಗಿ ತಮ್ಮ ವಾಸಸ್ಥಳಗಳತ್ತ ಧಾವಿಸಲು ಪ್ರಾರಂಭಿಸುತ್ತವೆ. ನಾಯಿಗಳು ಬೊಗಳುತ್ತವೆ, ಕೋಳಿಗಳು ಕೂಗುತ್ತವೆ. ವಿಜ್ಞಾನಿಗಳು ಸೂರ್ಯನ ಅಪರೂಪ ದರ್ಶನವನ್ನು ನೋಡಿ ಹರ್ಷಚಿತ್ತರಾಗಿ ತಮ್ಮ ಶೋಧನೆಗಳನ್ನು ಮುಂದುವರಿಸುತ್ತಾರೆ.

ಚಂದ್ರ : (ಸೂರ್ಯನಿಗೆ ಅಡ್ಡ ನಿಂತು) ಎಲೈ ಮದಾಂಧನಾದ ಸೂರ್ಯ, ಬೈಗು, ಬೆಳಗು ನಿನ್ನಿಂದಲೇ ಅಲ್ಲವೇ ಆಗುವುದು? ಆದರೆ ಅದು ಒಂದು ಕ್ಲಪ್ತಕಾಲದಲ್ಲಿ ಮಾತ್ರ ನಿನಗೆ ಸಾಧ್ಯ. ಈಗ ನೋಡು ನಡು ಹಗಲಿನಲ್ಲೇ ಯಾರು ಕತ್ತಲನ್ನುಂಟು ಮಾಡಿದ್ದಾರೆ. ಈಗಲಾದರೂ ನನ್ನ ಪ್ರಭಾವ ಎಷ್ಟೆಂಬುದು ನಿನಗೆ ಅರಿವಾಯಿತೆ? ಇನ್ನು ಮುಂದೆ ನಿನ್ನನ್ನು ಸತತವಾಗಿ ಬೆನ್ನಟ್ಟಿ ಬರಲೇ?

ಸೂರ್ಯ : ಚಂದ್ರಾ, ನನ್ನಿಂದ ಅಚಾತುರ್ಯವಾಯಿತು. ಶಾಂತಚಿತ್ತನಾಗು,


ಭೂಲೋಕದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿದೆ. ದೇವತೆಗಳು ಗಾಬರಿಯಾಗಿದ್ದಾರೆ. ನಿನ್ನ ಪ್ರಭಾವವನ್ನರಿಯದೇ ನಿನ್ನನ್ನು ನಿಂದಿಸಿದ್ದು ತಪ್ಪಾಯಿತು. ಇನ್ನು ನಾವಿಬ್ಬರೂ ಎಂದಿನಂತೆ ಅನ್ಯೋನ್ಯವಾಗಿರೋಣ ಸ್ವಲ್ಪ ದಾರಿ ಬಿಡು.

ಚಂದ್ರ : ಆಗಬಹುದಪ್ಪಾ, ನಾನು ನಿನ್ನಷ್ಟು ಜಂಭದವನಲ್ಲ. ಆದರೆ ಒಂದನ್ನು ಅರಿತುಕೋ ಈ ವಿಶ್ವದಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎನ್ನುವ ಕಾಲವಿದಲ್ಲ. ನಿನ್ನ ನಿತ್ಯದ ಚಲನೆಯಲ್ಲಿ ಇರುವ ನೀತಿ ಪಾಠ ''ಏರಿದವನು ಇಳಿಯಲೇಬೇಕು'' ಎಂಬುದನ್ನು ನೀನೇ ಮರೆತ್ತಿದ್ದೆಯಲ್ಲಾ. ನಿಗಗೀಗ ಅದನ್ನು ಜ್ಞಾಪಕ ಮಾಡಿಕೊಟ್ಟಿದ್ದೇನೆ. ಇದೋ ದಾರಿಯಿಂದ ಅಡ್ಡ ಸರಿದಿದ್ದೇನೆ. ಮುಂದೆ ಚಲಿಸುವಂತನಾಗು.

(ಸೂರ್ಯನ ಪಥದಿಂದ ಚಂದ್ರ ಅಡ್ಡ ಸರಿಯುತ್ತಾನೆ. ಭೂಲೋಕದಲ್ಲಿ ಬೆಳಕು ಬರಲಾರಂಭಿಸುತ್ತದೆ. ಜನರು ಹರ್ಷದಿಂದ ಜಯಕಾರ ಮಾಡುತ್ತಾರೆ.)

ಸೂರ್ಯ : ಚಂದ್ರಾ, ನನಗೆ ಒಳ್ಳೆಯ ನೀತಿಯನ್ನು ಕಲಿಸಿದೆ. ಇನ್ನೂ ಯಾವಾಗಲೂ ನಾನು ನಿನ್ನೊಡನೆ ಈ ರೀತಿ ನಡೆದುಕೊಳ್ಳುವುದಿಲ್ಲ. ಎಂದಿನಂತೆ ನಾವು ಅನ್ಯೋನ್ಯವಾಗಿ ನಮ್ಮ ಕೆಲಸಗಳನ್ನು ನಡೆಸಿಕೊಂಡು ಹೋಗೋಣ.

(ನಂತರ ಇಬ್ಬರೂ ನಗುನಗುತ್ತಾ ತಮ್ಮ ತಮ್ಮ ಪಥಗಳಲ್ಲಿ ನಿರ್ಗಮಿಸುತ್ತಾರೆ. ದೇವಲೋಕ ಮತ್ತು ಭೂಲೋಕಗಳಲ್ಲಿ ಪ್ರಾರ್ಥನೆ, ಭಜನೆ, ಜಯಕಾರಗಳ ಧ್ವನಿ ಮೊಳಗುತ್ತಿರುತ್ತದೆ.)



''ಮೈ ಮರೆತ
ಮಾದ ನೀರು
ಸೇದುತ್ತಿರುವುದು''

ಸಹಬಾಳ್ವೆ - ಸಹಜೀವನ

-ಎಂ. ಎಸ್. ಕೆ.

ಇತ್ತೀಚೆಗೆ ಸಹಜೀವನ ಮತ್ತು ಸಹಬಾಳ್ವೆಯ ಅಗತ್ಯವನ್ನು ಕುರಿತು ಘಂಟೆಗಟ್ಟಲೆ ಬಿಗಿಯುವ ಭಾಷಣಗಳನ್ನು ಬಹಳಷ್ಟು ಕೇಳುತ್ತಿದ್ದೇವೆ. ಇನ್ನು ಮುಂದೆ ಇನ್ನೆಷ್ಟು ಕೇಳಬೇಕೋ ಆ ದಯಾಮಯಿಯಾದ ಭಗವಂತನಿಗೇ ಗೊತ್ತು. ಆದರೆ ಆ ಭಾಷಣಕಾರರು ಈ ನಮ್ಮ ಭರತ ಭೂಮಿಯಲ್ಲಿ, ಈ ಭರತ ಖಂಡದಲ್ಲಿ, ಈ ಭರತ ವರ್ಷದಲ್ಲಿರುವಷ್ಟು ಸಹಿಷ್ಣುತೆ, ಸಹಜೀವ, ಸಹಬಾಳ್ವೆ ಬೇರೆಲ್ಲೂ ಸಿಗಲಾರದು ಎಂಬ ಸತ್ಯವನ್ನು ಅದೇಕೆ ಮರೆತಿದ್ದಾರೋ ನಾನಂತೂ ಅರಿಯೆ.

ನಾವು ನಮ್ಮ ದಿನನಿತ್ಯದ ಪರಿಸರದಲ್ಲಿ ಹೊಂದಿಕೊಂಡು ನಡೆಸುವ ಸಹಬಾಳ್ವೆಯನ್ನು ನೋಡಿ, ಕೊಂಡಾಡಿ, ಆನಂದಿಸಿ, ಶ್ಲಾಘಿಸಿ, ಅದನ್ನು ಜಗತ್ತಿನ ಮೂಲೆ ಮೂಲೆಗೂ ಪಸರಿಸುವ ಬದಲು ಸುಮ್ಮನೇ ಬಂದು ನಮ್ಮ ತಲೆ ಏಕೆ ಕೊರಿಯಬೇಕು ಈ ಭಾಷಣಿಗರು.

ಈ ನಮ್ಮ ನಾಡಿನ ಸಹಬಾಳ್ವೆ, ಸಹಜೀವನ ಮತ್ತು ಸಂಘಶಕ್ತಿಯನ್ನು ಗಮನಿಸಿ ಆನಂದಿಸಲು ನಾವೇನೂ ಅಸಾಧ್ಯತರಬೇತಿ ಪಡೆಯಬೇಕಾಗಿಲ್ಲ. ಹಿಂದಿನಕಾಲದವರಂತೆ ಕಷ್ಟ ಪಟ್ಟು ತಪಸ್ಸು ಮಾಡಿ, ವರಸಿದ್ಧಿ ಪಡೆಯಬೇಕಾಗಿಲ್ಲ. ಕೈಯಲ್ಲಿರುವ ಕಾಸನ್ನು ಖರ್ಚು ಮಾಡಬೇಕಾಗಿಲ್ಲ. ನಾವು ಮಾಡಬೇಕಾದ್ದು ನಮ್ಮ ದೃಷ್ಟಿ ಕೋನವನ್ನು ಸ್ವಲ್ಪ ಆಕಡೆ, ಈ ಕಡೆ ಹರಿಸಬೇಕಾದ್ದು ಮಾತ್ರ.

ಹಿಂದಿನಕಾಲದಲ್ಲಿ ನಮಗೂ, ಬಿಳಿಯರಿಗೂ ಹೋಲಿಸಿ ಹೀಗೆ ಹೇಳುತ್ತಿದ್ದರು: ''ಇಂಗ್ಲೇಂಡಿನವರು ತಮ್ಮ ಶೌಚ ಕಾರ್ಯವನ್ನು ಮನೆ ಒಳಗೂ, ಊಟವನ್ನು ಮನೆ ಹೊರಗೂ ಮಾಡುತ್ತಾರೆ. ನಾವು, ಭಾರತೀಯರು ತದ್ವಿರುದ್ಧ. ನಮ್ಮ ಶೌಚಕಾರ್ಯ ಮನೆ ಹೊರಗೆ. ಊಟ ಒಳಗೆ.'' ಈ ಹೇಳಿಕೆ ಹಿಂದೆಂದೋ ನಮಗೆ ಬುದ್ಧೀ ಇನ್ನೂ ತಿಳಿಯದಿದ್ದಾಗ, ನಮಗೆ ಸ್ವಾತಂತ್ರ್ಯ ಇನ್ನೂ ಬರೆದಿದ್ದಾಗ ಸರಿ ಇರಬಹುದು. ಆದರೆ ಇದು ಈಗ ಸುತರಾಂ ತಪ್ಪು. ನಾವು ಈಗ ನಮ್ಮ ಶೌಚಕಾರ್ಯವನ್ನೂ, ಊಟ, ಉಪಹಾರವನ್ನೂ ಒಟ್ಟಿಗೇ ಒಂದೇ ಜಾಗದಲ್ಲಿ ಮಾಡುತ್ತೇವೆ. ರಸ್ತೆ ಕೊನೆಯ ಮೂಲೆಯಲ್ಲಿ ದೋಸೇ ಕ್ಯಾಂಪ್ ನಡೆದಿರುತ್ತೆ. ಪಕ್ಕದಲ್ಲಿ ಭೇಲ್ ಪುರಿ ಗಾಡಿ ಗಾಸ್ ಲೈಟ್ ಬೆಳಗಲ್ಲಿ ರಾರಾಜಿಸುತ್ತಿರುತ್ತೆ. ಅದರ ಪಕ್ಕದಲ್ಲಿ ಎಗ್ ರೈಸ್, ಕೋಳೀ ಕಬಾಬ್ ಗಾಡಿ ತನ್ನ ಘಮಲನ್ನು ದಿಕ್ಕು ದಿಕ್ಕಿಗೆ ಪಸರಿಸುತ್ತಾ ನಿಂತಿರುತ್ತೆ. ಅದರ ಹಿಂದಿನಲ್ಲೇ ಇರುವ ಮೋರಿಯನ್ನು ಸಾರ್ವಜನಿಕ ಮೂತ್ರಿಯಾಗಿ ಮಾಡಿಕೊಂಡು ಅನೇಕರು ಅದನ್ನು ನಿಸ್ಸಂಕೋಚವಾಗಿ ಉಪಯೋಗಿಸುತ್ತಿರುತ್ತಾರೆ. ಆಜೂ-ಬಾಜೂ ಯಾರಿದ್ದಾರೆ, ಯಾರಿಲ್ಲಾ ಎಂಬ ಮುಲಾಜು ಅವರಿಗೆ ಇರುವುದೇ ಇಲ್ಲ.

ದೋಸೇ ತಿನ್ನುವವರಾಗಲೀ, ಭೇಲ್ ಪುರಿ ನುಂಗುವವರಾಗಲೀ, ಕಬಾಬ್ ಕಬಳಿಸುವವರಾಗಲೀ ಯಾರಿಗೂ ಆ ಮೂತ್ರಿಯ ಕಡೆಯಾಗಲೀ, ಅದರ ಗಬ್ಬುನಾಥದ

ಕಡೆಯಾಗಲೀ ಗಮನವೇ ಇರುವುದಿಲ್ಲ. ಯಾರೂ ಆ ಮೂರ್ತಿಯನ್ನು ಸಂವರ್ಧಿಸುವವರನ್ನು ತಡೆಯಲು ಹೋಗುವುದೇ ಇಲ್ಲಾ. ಇದೊಂದು ಸಹಬಾಳ್ವೆಯ ಲಕ್ಷಣವಲ್ಲವೇ. ಇದು ನಮ್ಮ ಪುಣ್ಯ ಭೂಮಿಯನ್ನು ಉಳಿದು ಈ ಜಗತ್ತಿನ ಬೇರೆಲ್ಲಾದರೂ ಸಾಧ್ಯವೇ?

ಮೊನ್ನೆ ಉತ್ತರ ಕರ್ನಾಟಕದ ಒಂದು ಊರಿಗೆ ಹೋಗಿದ್ದೆ. ಅವತ್ತು ಅಲ್ಲಿ ಬಂದ್ ಆಚರಿಸುತ್ತಿದ್ದರು. ಕಾರಣ ಕೇಳಿದೆ. ಒಬ್ಬೊಬ್ಬರು ಒಂದೊಂದು ಕಾರಣ ಹೇಳಿದರು, ಅವರ ದೃಷ್ಟಿಗನುಸಾರವಾಗಿ. ಕೋರ್ಟ್ ಬೇಕು, ಪೆಟ್ರೋಲ್ ಬೆಲೆ ಇಳಿಸಿ, ಲೈಟ್ ಬಿಲ್ ಜಾಸ್ತಿ ಮಾಡ ಬೇಡಿ, ರೈಲ್ ಆಫೀಸ್ ಇಲ್ಲೇ ಬೇಕು ಇತ್ಯಾದಿ, ಇತ್ಯಾದಿ. ನಾನು ಸುಮ್ಮನಿದ್ದಿದ್ದರೆ ಚೆನ್ನಾಗಿತ್ತು. ಹಾಳಾದ್ದು ಆ ಜಾಯಮಾನ ನನಗೆ ದೇವರು ಕೊಡಲೇ ಇಲ್ಲಾ. ''ಅಲ್ರೀ. ಏನೇನೋ ಕಾರಣ ಹೇಳ್ತಿದ್ದೀರಲ್ಲ. ಸರಿಯಾದ ಕಾರಣ ಯಾವುದಪ್ಪಾ ಈ ಬಂದ್ ಗೇ'' ಅಂತ ಕುತೂಹಲ ತೋರಿಸಿದೆ. ''ಅಲ್ರೀ ಯಜಮಾನ್ರೇ. ಬಂದ್ ಅಂದ್ರೆ ಬಂದ್. ಕಾರಣ ಯಾಕ್ರೀ ಬೇಕು. ಬಂದ್ ಮಾಡೂಂತ ಹೇಳಿದ್ದಾರೆ ರಾಜಕಾರಣಿಗಳು. ಮಾಡಿದ್ರಾಯ್ತು. ಕಾರಣ ಕಟ್ಕೊಂಡ್ ಈಗೇನಾಗಬೇಕ್ರೀ. ಬನ್ನಿ ಚಾ, ಚೂಡಾ ತೊಕ್ಕೋಳೋಣ ಹೊಟಲ್ ಬಂದ್ ಆಗೋಕ್ಮುಂಚೆ'' ಅಂದ್ರು. ಆಹಾ ಇದಲ್ವೇ ನಮ್ಮ ರಾಜಕೀಯಕ್ಕೂ, ಪಬ್ಲಿಕ್‌ಗೂ ಇರೋ ಅಂಡರ್ ಸ್ಟ್ಯಾಂಡಿಂಗ್. ಇದಕ್ಕಿಂತಾ ಒಳ್ಳೆ ಎಗ್ಸಾಂಪಲ್ ಬೇಕ ಸಹಕಾರ ಮತ್ತು ಸಹಬಾಳ್ವೆಗೆ?.

ಸಹಜೀವನದ ಮತ್ತೊಂದು ಎಗ್ಸಾಂಪಲ್ ತೊಗೊಳ್ಳೋಣ. ನಾನು ವಾಸಿಸುವ ಮನೆಯ ಹತ್ತಿರವೇ ಒಂದು ಗಣೇಶನ ದೇವಸ್ಥಾನ ಇದೆ. ಅದರ ಪಕ್ಕದಲ್ಲೇ ಕಟುಕನ ಕಸಾಯಿಖಾನೆ. ಅಲ್ಲೇ ನಾಲ್ಕಾರು ಬಾರ್‌ಗಳು, ಮತ್ತು ಸಾರಾಯಿ ಅಂಗಡಿ. ಕಟುಕ ಫುಟ್ಪಾತಿನಲ್ಲೇ ಕುರಿಗಳನ್ನು ಕತ್ತರಿಸುತ್ತಾನೆ. ಇದಿರುಮನೆಯವರು ಏನೂ ಆಗುತ್ತಾ ಇಲ್ಲಾ ಎಂಬ ಭಾವನೆಯಲ್ಲಿ ಬಿದ್ದಿರುವ ಕುರಿಗಳನ್ನು ದಾಟಿಕೊಂಡೇ ಹೋಗುತ್ತಾರೆ. ಯಾರೂ ಆ ಕಟುಕನನ್ನು ಪ್ರಶ್ನಿಸುವುದೇ ಇಲ್ಲ. ದೇವಸ್ಥಾನದಲ್ಲಿ ಪೂಜೆ ಸಾಂಗವಾಗಿ ನಡೆದು ಘಂಟಾ ನಿನಾದ ಕೇಳಿಸುತ್ತಿರುತ್ತದೆ. ಆ ನಿನಾದ ಅಲ್ಲಿ ಸತ್ತು ಬಿದ್ದಿರುವ ಕುರಿಗಳ ಆತ್ಮಕ್ಕೆ ಚಿರಶಾಂತಿಯನ್ನು ಕೊಡುತ್ತಿರಬೇಕು. ಇದು ಸಂಘಜೀವನ, ಸಹಬಾಳ್ವೆ, ಸಹಜೀವನಗಳು ಅಲ್ಲದಿದ್ದರೆ ಮತ್ಯಾವುದು.

ಮೊನ್ನೆ ಊರಲ್ಲಿ ಯಾವುದೋ ಗಲಾಟೆ ನಡೆಯುತ್ತಿತ್ತು. ಮನೆ ಮುಂದೆ ನಿಂತು ನೋಡುತ್ತಿದ್ದೆ. ಕೆಲವರು ಸಮಾಜ ಸೇವಕರು ಬಂದು ರಸ್ತೇಲಿ ಜಮಾಯಿಸಿದರು. ಅಲ್ಲಿ ಬಂದ ಬಿ.ಟಿ.ಎಸ್. ಬಸ್ಸಿಗೆ ಯದ್ವಾ ತದ್ವಾ ಕಲ್ಲು ಬೀರಿದರು. ಗಾಜೆಲ್ಲಾ ಪುಡಿ ಪುಡಿ. ಬಸ್ಸಿನಲ್ಲಿದ್ದವರೆಲ್ಲಾ ಧಡ ಧಡನೇ ಕೆಳಗಿಳಿಸರು. ಕೆಲವರಿಗೆ ಪೆಟ್ಟಾಗಿತ್ತು. ಯಾರೂ ಆ ಸಮಾಜ ಸೇವಕರನ್ನು ಪ್ರಶ್ನಿಸಲೇ ಇಲ್ಲ. ಪೆಟ್ಟು ತಿಂದವರೂ, ಪೆಟ್ಟಾಗದವರೂ ಎಲ್ಲರೂ ಆ ಸೇವಕರಿಗೆ ತಮ್ಮ ಬೆಂಬಲ, ಸಹಾನುಭೂತಿ ತೋರಿಸುವಂತಿತ್ತು ಆ ಸೀನ್. ಎಲ್ಲರೂ ಈ ಕಲ್ಲಿನ ತೂರಾಟಕ್ಕೆ ನಮ್ಮ ಘನ ಸರ್ಕಾರವೇ ಕಾರಣ ಎಂದು ತೀರ್ಮಾನಿಸಿಬಿಟ್ಟರು.

ಇಂಥಾ ಸಹಕಾರ ಸ್ವಭಾವ ಬೇರೆಲ್ಲೂ ದುಡ್ಡು ಕೊಟ್ಟರೂ ಸಿಗದು. ಬೇಕಾದರೆ, ಇನ್ನೂ ಇದರಲ್ಲಿ ಅನುಮಾನವಿದ್ದರೆ ಒಂದು ಫೋರಿನ್ ಟೂರ್ ಮಾಡಿ ಬನ್ನಿ. ಗೊತ್ತಾಗುತ್ತೆ, ನಾನು ಹೇಳೋದೆಲ್ಲಾ ಕರೆಕ್ಟ್ ಅಂತ.

ಆ ಫೋರಿನ್ ಅಲ್ಲಿ ರಸ್ತೇಲಿ, ಪಾರ್ಕಿನಲ್ಲಿ ತಿಂಡೀ ತಿಂದು ಖಾಲೀ ಪೇಪರ್ ಬೀದೀಲೆ ಬಿಸಾಕ್ಬಾರ್ದಂತೆ. ಅದ್ಕೇ ಇಟ್ಟಿರೋ ಡಬ್ಬಕ್ಕೇ ಹೋಗಿ ಅದರ ಮುಚ್ಚಳ ತೆಗೆದು ಪೇಪರ್ ಹಾಕಿ ಮತ್ತೆ ಮುಚ್ಚಳ ಮುಚ್ಚ ಬೇಕಂತೆ. ಅಲ್ಲಿ ನಮ್ಮಲ್ಲಿರೋ ತರಹ ರಸ್ತೇಗೆ ಮೋರೀನೇ ಇಲ್ಲವಂತೆ. ಬೇಕಾದ್ರೆ ದುಡ್ಡು ಕೊಟ್ಟು ಅಲ್ಲೇ ಇರೋ ಶೌಚಾಲಯಕ್ಕೇ ಹೋಗ್ಬೇಕಂತೆ. ಬಸ್ಸ್ಗೆ ಲಾರೀಗೇ ಕಲ್ಲು ಹೊಡೆದರೆ ಮುಲಾಜಿಲ್ಲದೆ ಜೈಲಿಗೇ ಹಾಕ್ತಾರಂತೆ. ಇದೆಂಥಾದ್ರೀ ನ್ಯಾಯ? ಅವರಿಗೆಲ್ಲಾ ಇನ್ನೂ ಸರಿಯಾಗಿ ಸ್ವಾತಂತ್ರ್ಯ ಬಂದಿಲ್ವಾ ಅಥವಾ ಅಲ್ಲಿನೋರ್ಗೆ ಸ್ವಾತಂತ್ರ್ಯ ಅಂದ್ರೆ ಏನೂಂತ ನಮ್ಮ ಥರ ಸರಿಯಾಗಿ ತಿಳಿದಿಲ್ಲಾಂತ ಕಾಣುತ್ತೆ.

ಅದಕ್ಕೇ ಅಲ್ವಾ ನಮ್ಮ ದೇಶಾನ ಪ್ರಪಂಚದಲ್ಲೆಲ್ಲಾ ಬಹುದೊಡ್ಡ ಡೆಮಾಕ್ರಸೀ ಅನ್ನೋದು. ಅದಕ್ಕೇ ನಾವೂನೂ ಡೆಮೋಕ್ರಾಟಿಕ್ಕಾಗೇ ನಮಗಿಷ್ಟ ಬಂದಹಾಗೇ ಇರ್ತೀವಿ. ಬೇಕಾದೋರು ಬೇಕಾದಹಾಗೆ ಭಾಷಣ ಮಾಡ್ಲೀ ಬಿಡ್ಲೀ. ನಾವು ಮಾತ್ರ ನಮ್ಮ ಸಹಜೀವನ, ಸಹಕಾರ ಎಂದಿಗೂ ಬಿಟ್ಕೊಡೋದಿಲ್ಲಾ. ತಿಳೀತಾ?

''ನೀವೆಲ್ಲಾ ಹೀಗೇ ಇದ್ದರೆ ಮುಂದಿನ 21ನೇ ಶತಮಾನಕ್ಕೆ ಹೇಗಪ್ಪಾ ಹೋಗ್ತೀರ?'' ಅಂದ್ರು, ಒಬ್ಬದೊಡ್ಡೋರು. ಇದೆಂಥಾಮಾತ್ರೀ. ನಾವು ನಮ್ಮ ಪುರಾತನ ಕಾಲದಿಂದ ಹೀಗೆ ಅಲ್ವಾ ಇದ್ದದ್ದು? ಈ 21ನೇ ಶತಮಾನ. ಏನ್ರೀ ಮಹಾ? ಬರುತ್ತೆ-ಹೋಗುತ್ತೆ. ನಮ್ಮ ಪಾಡಿಗೆ ನಾವು ಹೀಗೇ ಇದ್ರೆ ಅದೇನ್ಮಾಡುತ್ತೆ. ಅದರ ಪಾಡಿಗೆ ತೆಪ್ಪಗಿರುತ್ತೆ



''ಈ ಪಾಪಾಸು ಕಳ್ಳಿನೆಲ್ಲಾ ದಾಟಿಕೊಂಡು ಹೋಗಿ ಗಣೇಶನ್ನ ಅಲ್ಲಿ ಹೇಗೆ ಸ್ಥಾಪಿಸಿದರೂ ಅಂತೀನಿ?''

ತಂದೆ

-ಸಾ.ಕೃ. ಪ್ರಕಾಶ

ಸಾಮಾನ್ಯವಾಗಿ ಎಲ್ಲ ಕನ್ನಡಿಗರಿಗೂ ಇರುವಂತೆ ಈರೇಶಿಗೂ ಒಂದು ಆಸೆ ಇತ್ತು. ತನ್ನ ಮಗನೂ ಲಕ್ಷಣವಾಗಿ ಇಂಗ್ಲೀಷ್ ಮಾತಾಡಬೇಕು. ಇಂಗ್ಲೀಷ್‌ನಲ್ಲೆ ಬರೆಯಬೇಕು ಎಂದು. ಅದಕ್ಕೆ ಮಗು ಹುಟ್ಟಿತು ಎಂದು ತಿಳಿದ ತಕ್ಷಣ ನಿಶ್ಚಯಿಸಿಬಿಟ್ಟ ಇಂಗ್ಲೀಷ್ ಶಾಲೆಗೆ ಸೇರಿಸುವುದೆಂದು.

ಮಗ ಈರಭದ್ರನಿಗೆ ಒಂದು ವರ್ಷ ತುಂಬುತ್ತಿದ್ದಂತೆ ತನ್ನ ಪ್ರಯತ್ನ ಪ್ರಾರಂಭಿಸಿದ. ಮಕ್ಕಳ ತಂದೆ ತಾಯಿಗಳನ್ನು ಭೇಟಿಯಾಗಿ ಯಾವ ಶಾಲೆ ಚೆಂದ, ಎಲ್ಲಿ ಇಂಗ್ಲೀಷು ಚೆನ್ನಾಗಿ ಕಲಿಸುತ್ತಾರೆ ಎಂದೆಲ್ಲ ಮಾಹಿತಿ ಸಂಗ್ರಹಿಸಿದ. ಸಾಧಕ ಬಾಧಕಗಳನ್ನೆಲ್ಲ ಸರಿಯಾಗಿ ಯೋಚಿಸಿ ಒಂದು ಶಾಲೆಗೆ ಸೇರಿಸುವುದೆಂದು ತೀರ್ಮಾನಕ್ಕೆ ಬಂದ. ಇವನೇನೋ ತೀರ್ಮಾನಿಸಿದ ಆದರೆ ಶಾಲೆಯವರು ಇವನ ತೀರ್ಮಾನಕ್ಕೆ ಬೆಲೆ ಕೊಟ್ಟು ಶಾಲೆಗೆ ಸೇರಿಸಿಕೊಳ್ಳಬೇಕಲ್ಲ. ಈರೇಶಿ ಹೋದಾಗ ತಾರಮ್ಮಯ್ಯ ಆಡಿದರು. ಈರೇಶಿಗೆ ಅಕಾಶವೇ ತಲೆಯಮೇಲೆ ಕಳಚಿಬಿದ್ದಂತಾಯಿತು. ಆದರೆ ಅವನು ಛಲವಾಗಿ ಯಾರು ಯಾರ ಮೂಲಕವೋ ಶಿಫಾರ್ಸು ಮಾಡಿಸಿದ. ಕಡೆಗೆ ಮಂತ್ರಿಗಳಿಂದಲೇ ಕಾಗದ ತಂದ ಸಂದರ್ಶನಕ್ಕೆ ಕರೆಬಂದಾಗ ಧನ್ಯನಾದೆ ಎಂದುಕೊಂಡ. ಮೂರು ದಿನ ರಜಾ ಹಾಕಿ ತಾನೂ ಓದಿ ಹೆಂಡತಿಗೂ ತರಬೇತಿ ನೀಡಿ ಸಂದರ್ಶನಕ್ಕೆ ಸಿದ್ದನಾಗಿ ಹೋದ. ನಂತರ ಇಪ್ಪತ್ತುಸಾವಿರವನ್ನು ಬಿಲ್ಡಿಂಗ್ ಫಂಡ್ ಎಂಬ ಹೆಸರಿನಲ್ಲಿ ಕಕ್ಕಿದ ಮೇಲೇ ಈರಭದ್ರನಿಗೆ ಸೀಟು ಸಿಕ್ಕಿತು ಬೇಬಿನರ್ಸರಿಗೆ.

ಮಗ ಶಾಲೆಗೆ ಹೋಗಲು ಪ್ರಾರಂಭಿಸಿದ ಮೇಲೇ ಈರೇಶಿಗೆ ತಿಳಿದದ್ದು ಈರಭದ್ರ ಇಂಗ್ಲೀಷಿನ ಜೊತೆ ಕನ್ನಡವನ್ನೂ ಓದಬೇಕೆಂದು. ಕನ್ನಡದಲ್ಲಿ ಪಾಸಾಗದಿದ್ದರೆ ಪರೀಕ್ಷೆಯಲ್ಲಿ ಫೈಲು ಎಂದಾಗ ಮಗನಿಗಿಂತ ಈರೇಶಿಯೇ ಬೆದರಿದ. ಬೆದರಿದ್ದಕ್ಕೆ ಕಾರಣ ಮಗ ಕನ್ನಡ ಕಲಿಯಬೇಕು ಎನ್ನುವುದಕ್ಕಿಂತ ಇಂಗ್ಲೀಷ್ ಶಾಲೆಯ ಪ್ರಿನ್ಸಿಪಾಲರು ''ಇಂಗ್ಲೀಷ್ ಶಾಲೆಯಲ್ಲಿ ಕನ್ನಡ ಕಲಿಸುವ ವ್ಯವಸ್ಥೆ ಇರಲು ಹೇಗೆ ಸಾಧ್ಯ, ಅದೇನಿದ್ದರೂ ಪೇರೆಂಟ್ಸುಗಳ ಕೆಲಸ'' ಎಂದು ಈರೇಶಿಯ ಕರ್ತವ್ಯದ ಕಡೆ ಬೆಟ್ಟು ಮಾಡಿ ತೋರಿಸಿದುದಾಗಿತ್ತು. ಈಗ ಈರೇಶಿಗೆ ಬೇರೆ ದಾರಿಯೇ ಇರಲಿಲ್ಲ. ಕನ್ನಡ ಪಠ್ಯಪುಸ್ತಕ ತಂದು ಓದಿ ಈರಭದ್ರನಿಗೆ ಕನ್ನಡ ಹೇಳಿಕೊಡಲು ಪ್ರಾರಂಭಿಸಿದ. ಈರಭದ್ರ ಮುಂದಿನ ತರಗತಿಗೆ ಹೋಗುತ್ತಿದ್ದಂತೆ ಈರೇಶಿಯ ತಲೆನೋವೂ ಹೆಚ್ಚಾಗುತ್ತಾ ಹೋಯಿತು.

ಈರಭದ್ರನಿಗೆ ತಾನು ಭಾರಿ ಬುದ್ಧಿವಂತನೆಂಬ ನಂಬಿಕೆಯಿತ್ತು. ಆದರೆ ಈರೇಶಿಗೇ ಮಗನ ಮೇಲೆ ಅಷ್ಟು ನಂಬಿಕೆ ಇರಲಿಲ್ಲ. ಅದಕ್ಕೇ ಕನ್ನಡ ಹೇಳಿಕೊಡುವುದರ ಜೊತೆಗೆ ಸಂಭವನೀಯ ಪ್ರಶ್ನೆಗಳಿಗೆ ಉತ್ತರ ಬರೆದು ಉರುಹೊಡೆಸುತ್ತಿದ್ದ. ಕನ್ನಡವೆಂದಮೇಲೆ

ಪ್ರಭಂದವಿರಲೇಬೇಕಲ್ಲ, ಇದ್ದೇ ಇರುತ್ತದೆ. ಆದರೆ ವಿಷಯ ಏನಿರುತ್ತದೆ. ಈರಭದ್ರ ತಿಣುಕಾಡಿ ಕಡೆಗೆ ''ನನ್ನ ಆತ್ಮೀಯ ಮಿತ್ರ'' ಎಂಬ ವಿಷಯ ಹೇಳಿಕೊಟ್ಟು ಉರುಹೊಡೆಸಿದ. ದುರದೃಷ್ಟವಶಾತ್ ಪರೀಕ್ಷೆಯಲ್ಲಿ ಮಿತ್ರನ ಬದಲು ತಂದೆಯ ಬಗ್ಗೆ ಕೇಳಿಬಿಟ್ಟರು. ಈರಭದ್ರನಿಗೆ ತಬ್ಬಿಬ್ಬಾಯಿತು. ಸ್ವಲ್ಪ ಹೊತ್ತು ಏನುಮಾಡುವುದೆಂದು ತೋಚಲಿಲ್ಲ. ಆದರೆ ಅವನು ಈರೇಶಿಯ ಮಗನಲ್ಲವೆ! ಬೇರೆ ಪುಸ್ತಕಗಳಿಂದ ಅಲ್ಪಸ್ವಲ್ಪ ಬದಲಾಯಿಸಿ ತಂದೆ ಹೇಳಿಕೊಡುತ್ತಿದ್ದುದನ್ನು ಅವನು ನೋಡಿದ್ದ ತಾನೂ ಹಾಗೆ ಮಾಡಿದರಾಯಿತೆಂದುಕೊಂಡ. ಪ್ರಭಂದ ಬರೆದೇಬಿಟ್ಟ. ''ಜೀವನದಲ್ಲಿ ತಂದೆ ಬಹಳ ಮುಖ್ಯ. ತಂದೆ ಯಿಲ್ಲದಿದ್ದರೆ ಜೀವನ ಬರಡು ಎನಿಸುತ್ತದೆ. ನನಗೆ ಅನೇಕ ತಂದೆಯರಿದ್ದಾರೆ ಅವರಲ್ಲಿ ನಮ್ಮ ಪಕ್ಕದ ಮನೆಯ ಶಂಕರ ನನ್ನ ಅಚ್ಚುಮೆಚ್ಚಿನ ತಂದೆ. ಅವನನ್ನು ಕಂಡರೆ ನನಗೆ ಬಹಳ ಇಷ್ಟ. ಅವನು ನನ್ನ ಜೊತೆಯಲ್ಲಿ ಆಟ ಆಡುವುದಲ್ಲದೆ ಅವರ ತಾಯಿ ಮಾಡಿರುವ ತಿಂಡಿಯನ್ನು ನನಗೆ ಗುಟ್ಟಾಗಿ ತಂದುಕೊಡುತ್ತಾನೆ. ನಮ್ಮ ತಾಯಿಗೂ ಶಂಕರನೆಂದರೆ ಬಹಳ ಇಷ್ಟ. ವಿಶೇಷವಾದ ತಿಂಡಿ ತಿನಿಸು ಮಾಡಿದಾಗೆಲ್ಲ ಅವನನ್ನು ಕರೆದುಕೊಂಡು ಬರಲು ನನಗೆ ಹೇಳುತ್ತಾರೆ. ಅವರ ಮನೆಯವರು ಯಾರೂ ಇಲ್ಲದೆ ಅವನೊಬ್ಬನೇ ಇದ್ದಾಗ ಅಥವ ನಮ್ಮ ಮನೆಯಲ್ಲಿ ನಮ್ಮ ತಂದೆ ಇಲ್ಲದಿದ್ದಾಗ ಶಂಕರ ನಮ್ಮ ತಾಯಿಯ ಜೊತೆಯಲ್ಲಿಯೇ ಮಲಗುತ್ತಾನೆ......



ಈ ಚೂಡಾಮಣೀನೇನೋ ತಂದೆ. ಈಗ ಸುಂಕದವನ ಹತ್ರ ತಪ್ಪಿಸ್ಕೊಳ್ಳೋದು ಹೇಗೆ?

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.